# ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸರಿಮನೆ ನಾಗರಾಜ್.


## ದಲಿತ ಶಾಸಕರ ಮನೆಗಳ ಮುಂದೆ [illegible] ರಣೆ

ರಾಜ್ಯಾದ್ಯಂತ ದುರ್ಬಲ ವರ್ಗದವರ [illegible] ನಡೆಯುತ್ತಿದ್ದರೂ ಪರಿಹಾರ [illegible] "ಅಧಿಕಾರದಾಸೆಗೆ ತಮ್ಮನ್ನು [illegible]" ದಲಿತ ಶಾಸಕ, ಮಂತ್ರಿಗಳನ್ನು "ಎಚ್ಚರಿಸುವ [illegible]" [illegible] ರಾಜ್ಯಾದ್ಯಂತ ಅವರ ಮನೆಗಳ [illegible] ೨೭ರಂದು ದಲಿತ ಸಂಘರ್ಷ ಸಮಿತಿ ಧರಣಿ ನಡೆ[illegible] ಫಲ ಕೊಡದಿದ್ದರೆ ಅವರೆಲ್ಲರ ರಾಜೀನಾಮೆಗೆ ಒತ್ತಾಯಿಸಿ ತೀವ್ರ ಚಳವಳಿ ಹೂಡಲಾಗುವುದೆಂದು [illegible]


ಪ್ರಾಯೋಗಿಕ ಸಂಚಿಕೆ ೭ | ಕೊಪ್ಪ ೨೧-೨-೮೨ ಭಾನುವಾರ | ಖಾಸಗಿ ಪ್ರಸಾರಕ್ಕಾಗಿ


# ವಿದ್ಯುತ್ ಅಭಾವ ಮುಂದುವರಿವ ಸಂಭವ

ಕೊಪ್ಪ: ಈಗ ರಾಜ್ಯಾದ್ಯಂತ ತಲೆದೋರಿದ್ದು, ಹಳ್ಳಿಗಾಡಿನಲ್ಲಿ ಉಗ್ರವಾಗಿರುವ ವಿದ್ಯುತ್ ಅಭಾವ ಈ ವರ್ಷ ಜೂನ್ ವರೆಗಂತೂ ನೀಗುವ ಸಂಭವ ಇಲ್ಲ; ಇನ್ನೂ ಜಾಸ್ತಿಯಾದರೂ ಆಗಬಹುದು.

ಈ ಸೂಚನೆ ದೊರೆತದ್ದು ಇಲ್ಲಿ ಫೆ. ೧೮ ರಂದು ವಿದ್ಯುತ್ ಸರಬರಾಜಿನ ಅವ್ಯವಸ್ಥೆ ಹಾಗೂ ಮೀಟರ್ ರೀಡಿಂಗ್ ಬಗ್ಗೆ ಚರ್ಚಿಸಲು ವ್ಯವಸ್ಥೆಯಾಗಿದ್ದ ಸಾರ್ವಜನಿಕ ಸಭೆಯಲ್ಲಿ.

ಈ ಸಭೆಯನ್ನು ಇಲ್ಲಿನ 'ಅಂಕುರ ಬಳಗ' ವ್ಯವಸ್ಥೆಗೊಳಿಸಿತ್ತು. ವಿದ್ಯುತ್ತಿನ ಸಾಮಾನ್ಯ ಮತ್ತು ವಾಣಿಜ್ಯ ಬಳಕೆದಾರರು, ಸ್ಥಳೀಯ ಮುಖಂಡರು ಹಾಗೂ ವಿದ್ಯುತ್ ಮಂಡಳಿಯ ಸೆಕ್ಷನ್ ಆಫೀಸರ್ ಈ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯಲ್ಲಿ ಮಾತನಾಡಿದ ಹಲವರು ವಿದ್ಯುತ್ ಸರಬರಾಜಿನ ಅವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ, ಸಣ್ಣ ಉದ್ಯಮಿ-ವ್ಯಾಪಾರಿಗಳಿಗೆ, ಜನಸಾಮಾನ್ಯರಿಗೆ, ಆಸ್ಪತ್ರೆ, ನೀರು ಸರಬರಾಜು, ಟೆಲಿಫೋನ್ ಮುಂತಾದ ಸೇವೆಗಳಿಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿದರು. ವಿದ್ಯುತ್ ಕಚೇರಿಯ ಸುತ್ತ ಯಾವಾಗಲೂ ದೀಪ ಇರುವಾಗ, ಆಸ್ಪತ್ರೆಗೂ ವಿದ್ಯುತ್ ಸಂಪರ್ಕ ತೆಗೆಯುವ ಕ್ರಮವನ್ನು ಪ್ರಶ್ನಿಸಲಾಯಿತು.

ಕೋಟ್ಯಂತರ ರೂ. ಸಾರ್ವಜನಿಕ ಹಣ ಸುರಿದಂಥ ಕಾಳಿ ನದಿ ವಿದ್ಯುತ್ ಯೋಜನೆ ಯಂಥವು ಸರಿಯಾಗಿ ಕೆಲಸ ಮಾಡಲು ಸೋತಿರುವುದು; ಶರಾವತಿ, ಲಿಂಗನಮಕ್ಕಿ ಮುಂತಾದ ಕೇಂದ್ರಗಳಲ್ಲಿ ಹಲವಾರು ಉತ್ಪಾದಕ ಯಂತ್ರಗಳು ಪದೇ ಪದೇ ಕೆಟ್ಟು ಹೋಗುತ್ತಿರುವುದು; ಈಚೆಗೆ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ವರದಿಯಾಗಿರುವಂತೆ, ವಿದ್ಯುತ್ ಮಂಡಳಿಯ ಆಲೋಚನಾರಹಿತ ಕಾರ್ಯವಿಧಾನ ಮತ್ತು ಭ್ರಷ್ಟಾಚಾರಗಳಿಂದ ಮಂಡಳಿ ದಿವಾಳಿಯ ಹಂತಕ್ಕೆ ಮುಟ್ಟಿರುವುದು ಮುಂತಾದವನ್ನು ಹಲವರು ಟೀಕಿಸಿದರು.


(೩ನೇ ಪುಟ ನೋಡಿ.)


### ಪ್ರಾಥಮಿಕ ಶಾಲೆಯಲ್ಲಿ ಬೆಳ್ಳಿಯ ರಾಜ್ಯೋತ್ಸವ ಸ್ಪರ್ಧೆಗಳು

ಶೃಂಗೇರಿ: ಇಲ್ಲಿನ ಸರ್ಕಾರಿ ಬಾಲಕರ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವದ ಬೆಳ್ಳಿ ಹಬ್ಬದ ಅಂಗವಾಗಿ, ತಾ|| ಪಟ್ಟಣದಲ್ಲಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗಾಗಿ ಕೋರಸ್ ಗೀತ, ದೇಶಭಕ್ತಿಗೀತೆ ಮತ್ತು ಚಿತ್ರಕಲಾ ಸ್ಪರ್ಧೆಗಳನ್ನೂ, ಹಿ. ಪ್ರಾ. ಶಾಲಾ ಮಕ್ಕಳಿಗಾಗಿ ಅಣಕು, ಏಕಪಾತ್ರಾಭಿನಯ ಮತ್ತು ಜಾನಪದ ಗುಂಪು ನೃತ್ಯ ಸ್ಪರ್ಧೆಗಳನ್ನೂ ಏರ್ಪಡಿಸಲಾಗಿತ್ತು.

ತಹಸೀಲ್ದಾರ್ ಜಿ. ಅನಂತರಾವ್ ಕಾರ್ಯಕ್ರಮ ಉದ್ಘಾಟಿಸಿದರು. ಎಸ್. ಎಸ್. ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು.

ಹಿ. ಪ್ರಾ. ಶಾಲೆಯ ಮಟ್ಟದಲ್ಲಿ ಎಲ್ಲ ಪ್ರಥಮ ಬಹುಮಾನಗಳೂ ಇಲ್ಲಿನ ಬಾಲಕಿಯರ ಶಾಲೆ, ಮತ್ತು ಎಲ್ಲ ೨ ನೇ ಬಹುಮಾನಗಳೂ ದರೆಕೊಪ್ಪದ ಶಾಲೆಯ ಪಾಲಾದವು.

ವಿದ್ಯಾನಗರ ಮತ್ತು ಮಸಿಗೆ ಶಾಲೆಗಳ ಮಕ್ಕಳು ಕಿ. ಪ್ರಾ. ಶಾಲೆಗಳ ಸ್ಪರ್ಧೆಗಳಲ್ಲಿ ಹೆಚ್ಚು ಬಹುಮಾನಗಳನ್ನು ಪಡೆದರು.

ಸಂಜೆ ನಡೆದ ಬಹುಮಾನ ವಿತರಣೆ ಸಮಾರಂಭದ ಅಧ್ಯಕ್ಷತೆಯನ್ನು ವಲಯ ಅರಣ್ಯಾಧಿಕಾರಿ ಸೂರ್ಯಾಚಾರ್ ವಹಿಸಿದ್ದರು. ಸಹಾಯಕ ಇಂಜನೀಯರ್ ಎಂ. ಜಿ. ಸೋಮಶೇಖರ್ ಬಹುಮಾನ ಹಂಚಿದರು.

### ಫ್ಲಾಶ್ ಅಸೋಸಿಯೇಷನ್ ಆಶ್ರಯದ ಕ್ಷೇತ್ರಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು

ಶೃಂಗೇರಿ: ಇಲ್ಲಿನ ಹೊಸ ಸಾಂಸ್ಕೃತಿಕ ಸಂಸ್ಥೆ ಫ್ಲಾಶ್ ಅಸೋಸಿಯೇಶನ್ನಿನ ಆಶ್ರಯದಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ ಕ್ಷೇತ್ರಮಟ್ಟದ ಚರ್ಚೆ, ಭಾವಗೀತೆ ಮತ್ತು ಜನಪದ ಗೀತೆ ಸ್ಪರ್ಧೆಗಳು ಈಚೆಗೆ ನಡೆದವು.

ಕಾಲೇಜು ಉಪನ್ಯಾಸಕ ಕೆ. ಪುಟ್ಟಯ್ಯ ಸಮಾರಂಭ ಉದ್ಘಾಟಿಸಿದರು. ಧರ್ಮಪ್ಪ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಸ. ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಿ. ಗಜರಾಜು ಬಹುಮಾನ ಹಂಚಿದರು. ಜಯೇಶ್ ಸ್ವಾಗತಿಸಿದರು. ವೆಂಕಟೇಶ್ ವಂದಿಸಿದರು.

### ಜಿಲ್ಲಾ ಯುವಜನ ಮೇಳ ಚಿಕ್ಕಮಗಳೂರಲ್ಲಿ

ಚಿಕ್ಕಮಗಳೂರು: ಈ ಬಾರಿ ಶೃಂಗೇರಿಯಲ್ಲಿ ನಡೆಯುವುದೆಂದು ನಿರೀಕ್ಷಿಸಲಾಗಿದ್ದ ಜಿಲ್ಲಾ ಯುವಜನ ಮೇಳ ಫೆ. ೨೭, ೨೮ ಮತ್ತು ೨೮ ರಂದು ಚಿಕ್ಕಮಗಳೂರಿನಲ್ಲಿ ನಡೆಯುವುದೆಂದು ಗೊತ್ತಾಗಿದೆ.

ತಾಲೂಕುಗಳ ಮಟ್ಟದಲ್ಲಿ ನಡೆದ ಮೇಳಗಳ ವಿವಿಧ ಸ್ಪರ್ಧೆಗಳಲ್ಲಿ ವೈಯಕ್ತಿಕವಾಗಿ ಮೊದಲ ಮೂರು ಸ್ಥಾನ ಪಡೆದವರು ಹಾಗೂ ಮೊದಲ ಸ್ಥಾನ ಪಡೆದ ತಂಡಗಳು ಜಿಲ್ಲಾ ಮೇಳದಲ್ಲಿ ಭಾಗವಹಿಸುವರು. ಸುಮಾರು ೬೦೦ ಮಂದಿ ಯುವಜನರು ಭಾಗವಹಿಸುವ ನಿರೀಕ್ಷೆ ಇದೆ.

## ಕೊಪ್ಪ ನೀರು ಪೂರೈಕೆ ವ್ಯವಸ್ಥೆ ಅಧಿಕಾರಿಗಳ ವಿವರಣೆ

ಕೊಪ್ಪ: ಇಲ್ಲಿನ ನೀರು ಸರಬರಾಜು ಪರಿಸ್ಥಿತಿ ಕುರಿತು ಪುರಸಭಾ ಮುಖ್ಯಾಧಿಕಾರಿಗಳು ಕೆಲವು ಮಾಹಿತಿಗಳನ್ನು ನೀಡಿದ್ದಾರೆ.

'ದೀವಟಿಗೆ'ಯ ೧೭-೨-೮೨ ರ ಸಂಚಿಕೆಯಲ್ಲಿ 'ನಲ್ಲಿಯ ನೀರಿನಲ್ಲಿ ಕಪ್ಪೆ ಮರಿಗಳು' ಎಂಬ ಚುಟುಕು ವರದಿಯ ಹಿನ್ನೆಲೆಯಲ್ಲಿ ಅವರು ಮಾತಾಡುತ್ತಿದ್ದರು.

ಊರಿಗೆ ಸರಬರಾಜು ಮಾಡುವ ನೀರನ್ನು ಸೋಸುವುದಕ್ಕೆ ಬೇಕಾದ ತೊಟ್ಟಿ ಇಲ್ಲಿಇಲ್ಲ. ನೀರನ್ನು ಟ್ಯಾಂಕಿನಲ್ಲಿ ಶೇಖರಿಸಿ ಹಾಗೇ ನಲ್ಲಿಯಲ್ಲಿ ಬಿಡಬೇಕು. ಕೆರೆಯಲ್ಲಾದರೂ ಈಗ ಕಪ್ಪೆಗಳು ಮರಿ ಮಾಡುವ ಸಮಯ. ಮರಿಗಳು ಹಿಂಡು ಹಿಂಡಾಗಿ (ದೊಡ್ಡ ದೊಡ್ಡ ತೆಪ್ಪಗಳಂತೆ) ತೇಲುತ್ತಿರುತ್ತವೆ. ನೀರೆತ್ತುವ ಕೊಳವೆಯ ಮಾತಿಗೆ ಜಾಳಿಗೆಯಂಥದೇನಾದರೂ ಕಟ್ಟಿದರೆ ಕಸ, ಹುಲ್ಲು ಎಲ್ಲ ಕಟ್ಟಿಕೊಂಡು ನೀರೇ ಬರುವುದಿಲ್ಲ. ಮರಿಗಳಿಗೆ ಕಲ್ಲು ಹೊಡೆದು ದೂರ ಓಡಿಸಲು ಯತ್ನಿಸಿದರೆ (ಅದೇನೂ ಸುಲಭದ ಮಾತಲ್ಲ) ಕೆಲವು ಸತ್ತು ಕೊನೆಗೆ ನಲ್ಲಿಯಲ್ಲಿ ಸತ್ತ ಮರಿಗಳು ಬರುತ್ತವೆ. ಆದ್ದರಿಂದ, ಮರಿಗಳು ಕಪ್ಪೆಗಳಾಗಿ ಹೋಗುವವರೆಗೆ ಒಂದಷ್ಟು ಕಾಲ ನಲ್ಲಿ ನೀರು ಹಿಡಿಯುವಾಗ ಸೋಸಿ ಹಿಡಿಯುವುದು ಹೊರತು ಬೇರೇನೂ ಉಪಾಯವಿಲ್ಲ ಎಂದು ಅವರು ಪುರಸಭೆಯ ಅಸಹಾಯಕತೆ ತೋಡಿಕೊಂಡರು.

### ಹಾಲಿ ವ್ಯವಸ್ಥೆ

ಕೊಪ್ಪದಲ್ಲಿ ಹಾಲಿ [illegible] ಗ್ಯಾಲನ್ ನೀರು ಹಿಡಿಯುವ ಒಂದು ನೆಲಮಟ್ಟದ ಟ್ಯಾಂಕು ಇದೆ. ಕೆರೆಯಿಂದಲೂ ಮತ್ತು ಹೊಳೆಯಿಂದಲೂ ನೀರನ್ನು ಶೇಖರಿಸಿಕೊಂಡು ಸರಬರಾಜು ಮಾಡಲಾಗುತ್ತಿದೆ. ರಾತ್ರಿ ಹೊಳೆಯಿಂದ ನೀರು ಶೇಖರಿಸಿಕೊಂಡು ಬೆಳಿಗ್ಗೆ [illegible] ಪಂಪನ್ನೂ [illegible] ಒಟ್ಟಿಗೆ [illegible] ಸಾಕಾಗುತ್ತದೆ. ಹೊಳೆಯ ನೀರು [illegible] ಯಾಗಲು ಏಳೆಂಟು ಗಂಟೆ ಬೇಕಾಗುತ್ತದೆ [illegible] ಹಾಗೂ [illegible] ನೇರವಾಗಿ [illegible] ಗಳಿಂದ ಇಡೀ ದಿನ [illegible] ದುಬಾರಿಯಾಗುವುದರಿಂದ [illegible] ನೀರನ್ನು ಮಾತ್ರ ಒದಗಿಸಲಾಗುತ್ತಿದೆ.


(೩ನೇ ಪುಟಕ್ಕೆ)


## ಹರಿಹರಪುರದಲ್ಲಿ ಫೆ. ೨೮ರಂದು ಅಂಗವಿಕಲರ ಶಿಬಿರ

ಹರಿಹರಪುರ: ಇಲ್ಲಿನ ಶ್ರೀಮಠ, ಹೋಬಳಿಯ ಎಲ್ಲಾ ಪಂಚಾಯ್ತಿಗಳು ಹಾಗೂ ಕೊಪ್ಪ ಲಯನ್ಸ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಫೆ. ೨೮ ರಂದು ಇಲ್ಲಿ ಅಂಗವಿಕಲರನ್ನು ಗುರುತಿಸುವ ಹಾಗೂ ಅವರಿಗೆ ಪ್ರೋತ್ಸಾಹಧನ ಬಟವಾಡೆ ಮಾಡುವ ಶಿಬಿರ ಏರ್ಪಾಡಾಗಿದೆ.

ಶೃಂಗೇರಿ ತಾಲೂಕಿಗೆ ಸೇರಿದವರೂ ಈ ಶಿಬಿರದಲ್ಲಿ ಭಾಗವಹಿಸಬಹುದಾಗಿದ್ದು ಶೃಂಗೇರಿ ತಹಸೀಲ್ದಾರರೂ ಹಾಜರಿರುತ್ತಾರೆ.

ಚಿಕ್ಕಮಗಳೂರಿನ ಉಪವಿಭಾಗಾಧಿಕಾರಿ ನರಸಿಂಹಯ್ಯ ಮತ್ತು ಜಿಲ್ಲಾ ಅಂಗವಿಕಲರ ಕಲ್ಯಾಣ ಸಮಿತಿಯ ಅಧ್ಯಕ್ಷರು ಶಿಬಿರದಲ್ಲಿ ಹಾಜರಿರುತ್ತಾರೆ.

ವಾಹನಗಳನ್ನು ಹೊಂದಿರುವವರು ತಮ್ಮ ತಮ್ಮ ಪ್ರದೇಶದ ಅಂಗವಿಕಲರನ್ನು ಶಿಬಿರಕ್ಕೆ ಕರೆದೊಯ್ಯಲು ಸಹಕರಿಸಬೇಕೆಂದು ಕೊಪ್ಪ ತಹಸೀಲ್ದಾರ್‌ರವರು ವಿನಂತಿಸಿದ್ದಾರೆ.

---

ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಅಪಾರ ಕಷ್ಟ-ನಷ್ಟಗಳಿಗೆ ಈಡಾಗಿರುವ ಬಳಕೆದಾರರು, ವಿದ್ಯುತ್ ಮಂಡಳಿಯು ಬಳಕೆದಾರರೊಂದಿಗೆ ಮಾಡಿಕೊಂಡ ಒಪ್ಪಂದದ ಉಲ್ಲಂಘನೆ ಮಾಡುತ್ತಿದೆ ಎಂಬ ಆಧಾರದ ಮೇಲೆ ನ್ಯಾಯಾಲಯದಲ್ಲಿ ದಾವಾ ಹೂಡಲು ಅವಕಾಶವಿದೆ. ಈ ಬಗ್ಗೆ ಆಸಕ್ತಿ ಇರುವವರು: ಬಳಕೆದಾರರ ವೇದಿಕೆ, ಕಲ್ಪನಾ ಥೇಟರ್ ಬಳಿ, ಉಡುಪಿ- ಇವರನ್ನು ಸಂಪರ್ಕಿಸಬೇಕಾಗಿ ಸಂಚಾಲಕರು ಪ್ರಕಟಿಸಿದ್ದಾರೆ

# ಮೋಜಿಗಾಗಿ ಚಿತ್ರಹಿಂಸೆ
# ರ್‍ಯಾಗಿಂಗ್

ಮಕ್ಕಳು ಆಡುತ್ತಿರುತ್ತಾರೆ. ಥಕ್ಕನೆ ಒಬ್ಬನ ಕಣ್ಣಿಗೆ ಒಂದು ಹಕ್ಕಳಿ ಹುಳ (ಜಿರಲೆ) ಬೀಳುತ್ತದೆ. ಉಳಿದವರನ್ನು ಕೂಗುತ್ತಾನೆ. ಮಕ್ಕಳೆಲ್ಲ ಹಕ್ಕಳಿಯ ಹಿಂದೆ ಬೀಳುತ್ತಾರೆ. ಅದು ವಿಚಿತ್ರವಾಗಿ ಓಡಾಡುತ್ತ, ಮಕ್ಕಳಿಂದ ತಪ್ಪಿಸಿಕೊಳ್ಳಲು, ಅವಿತುಕೊಳ್ಳಲು ಪ್ರಯತ್ನಿಸುತ್ತ ಅವಸ್ಥೆ ಪಡುತ್ತಿದ್ದರೆ, ಮಕ್ಕಳು ಖುಷಿಯಿಂದ ನಗೆದಾಡುತ್ತಾರೆ. ಅದರ ಒಂದು ಕಾಲು, ಒಂದು ರೆಕ್ಕೆ, ಇನ್ನೇನೇನೊ ಕಿತ್ತು, ಅದರ ಒದ್ದಾಟ ಕಂಡು ನಲಿಯುತ್ತಾರೆ.

ಹೀಗೆ, ಒಂದು ಅಸಹಾಯಕ ಪ್ರಾಣಿಯನ್ನೋ, ಹುಳುವನ್ನೋ ಮಕ್ಕಳು ಹಿಂಸೆಗೆ ಗುರಿಪಡಿಸಿ ಖುಷಿಪಡುವ ದೃಶ್ಯ ಸರ್ವೇ ಸಾಮಾನ್ಯ.

ಇಲ್ಲಿ ಮಕ್ಕಳ ಬದಲಿಗೆ ಕಾಲೇಜುಗಳ ಕೊಬ್ಬಿದ, ಬೇಜವಾಬ್ದಾರಿಯ ಹಿರಿಯ (ಸೀನಿಯರ್) ವಿದ್ಯಾರ್ಥಿಗಳನ್ನು (ಈಗ ವಿದ್ಯಾರ್ಥಿನಿಯರೂ ಕೂಡ) ಹಾಗೂ ಅಸಹಾಯಕ ಪ್ರಾಣಿಯ ಸ್ಥಾನದಲ್ಲಿ ಕಾಲೇಜಿನ ಜೂನಿಯರ್ ವಿದ್ಯಾರ್ಥಿಗಳನ್ನು ಇಟ್ಟು ನೋಡಿ. ಇದೇ ರ್‍ಯಾಗಿಂಗ್.

ಒಂದು ಹಿಂದಿ ಸಿನಿಮಾದಲ್ಲಿ ನೋಡಿದ್ದ ನೆನಪು: ಒಬ್ಬ ಹಳ್ಳಿ ಹುಡುಗ. ಆದರ್ಶ ಪ್ರಿಯತೆ ಹಾಗೂ ಗಾಂಭೀರ್ಯ ಸೂಚಿಸುವ ನಿಲುವು, ಉಡುಗೆ. ಕಾಲೇಜಿಗೆ ಸೇರಿದಾಗ ಸಹಜವಾಗಿ ಸಂಕೋಚ. ಬೇರೆಯವರಿಂದ ದೂರ ದೂರ. ಇವನ ಈ ವರ್ತನೆ ಹಳೆಯ ವಿದ್ಯಾರ್ಥಿ– ವಿದ್ಯಾರ್ಥಿನಿಯರ ಗಮನ ಸೆಳೆಯುತ್ತದೆ. ಕೀಟಲೆ ಮಾಡುತ್ತಾರೆ. ಸರಸವಾಗಿ ಗೇಲಿ ಮಾಡುತ್ತಾರೆ. ಹಳ್ಳಿ ಹುಡುಗ ಮೊದಲು ಸಂಕೋಚಪಟ್ಟರೂ ನಂತರ ಅಷ್ಟೇ ಸರಸಮಯವಾಗಿ, ಚತುರೋಕ್ತಿಯಿಂದ ಉತ್ತರ ಕೊಡುತ್ತಾನೆ. ಕ್ರಮೇಣ ಅವನ ಸಂಕೋಚ ಅಳಿದು, ಎಲ್ಲರೊಡನೆ ಬೆರೆಯುತ್ತಾನೆ, ಎಲ್ಲರಿಗೆ ಆತ್ಮೀಯನಾಗುತ್ತಾನೆ.

–ಬಹುಶಃ ರ್‍ಯಾಗಿಂಗ್ ಹುಟ್ಟಿದ್ದು ಹೀಗಿರಬಹುದು. (ಇದೇ ರ್‍ಯಾಗಿಂಗ್‌ನ ಮೂಲ ಎನ್ನುತ್ತಾರೆ.)

ಆದರೆ ಇಂದು ರ್‍ಯಾಗಿಂಗ್ ಯಾವ ರೂಪ ಪಡೆದಿದೆ?

ಅದರ ಮೂಲದಲ್ಲಿ ಇದ್ದಿರಬಹುದಾದ ಎಲ್ಲ ಸದುದ್ದೇಶ, ಸರಸ ಅಳಿದು, ಇಂದು ಅದೊಂದು ರಾಕ್ಷಸೀ ಪ್ರವೃತ್ತಿಯಾಗಿ, ಶಿಕ್ಷಣ ರಂಗದ ಒಂದು ಅತ್ಯಂತ ಅಪಾಯಕರ ಪಿಡುಗಾಗಿ, ವಿಷದಂತೆ ಎಲ್ಲಾ ಕಡೆ ಹಬ್ಬುತ್ತಿದೆ.

ಇತ್ತೀಚಿಗೆ ಈ ವಿಕೃತಿಯ ಕೆಲವು ಪ್ರಕರಣಗಳು ದೊಡ್ಡ ರೀತಿಯಲ್ಲಿ ಬೆಳಕಿಗೆ ಬಂದು, ಸರ್ಕಾರ ಅದರ ಬಗ್ಗೆ 'ಉಗ್ರ ಕ್ರಮ ತೆಗೆದುಕೊಳ್ಳುವ' ನಿರ್ಧಾರ ಮಾಡಿದ್ದೂ ಆಗಿದೆ.

### ಒಂದೆರಡು ಸ್ಯಾಂಪಲ್

ದಾವಣಗೆರೆ ಮೆಡಿಕಲ್ ಕಾಲೇಜಿನ ಒಬ್ಬ ಕಿರಿಯ ವಿದ್ಯಾರ್ಥಿಯನ್ನು 'ಹಿರಿಯರು' ಕೂಡಿಹಾಕಿ, ಬೆತ್ತಲೆಮಾಡಿ, ಒದ್ದು ತುಳಿದು, ಬಾಯಿಗೆ ಉಚ್ಚೆ ಹುಯ್ದು ............ಆ ವಿದ್ಯಾರ್ಥಿ ಹಿಂಸೆ ಅಪಮಾನ ತಾಳಲಾರದೆ. ಒಂದು ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ.

ಬಳ್ಳಾರಿಯ ಹೆಣ್ಣುಮಕ್ಕಳ ಮೆಡಿಕಲ್ ಕಾಲೇಜಿನ 'ಹಿರಿಯ' ವಿದ್ಯಾರ್ಥಿನಿಯರು ಕಿರಿಯರೊಬ್ಬಳನ್ನು ಕೊರೆವ ಚಳಿಯ ರಾತ್ರಿಯಲ್ಲಿ ಬೆತ್ತಲೆ ಮಾಡಿ, ಈಜುಕೊಳದಲ್ಲಿ ಇಡೀ ರಾತ್ರಿ ಈಜಾಡಿಸಿದರಂತೆ!

ಬಚ್ಚಲಿನ ನೀರು ಕುಡಿಸುವುದು, ಫ್ಯಾನಿಗೆ ಕೈಗಳನ್ನು ಕಟ್ಟಿ ನೇತು ಹಾಕುವುದು, ೬–೮ ಜನ ರೂಮಿನಲ್ಲಿ ಅನ್ನ ನೀರು ಕೊಡದೆ ಕೂಡಿ ಬೀಗ ಹಾಕಿಡುವುದು, ಊಟಕ್ಕೆ ಕೂರಿಸಿ, ಹಾಕಿದಷ್ಟು ಪೂರಿ ವಡೆ ವಡೆ ಹಸಿ ಮೆಣಸು ತಿನ್ನುವಂತೆ ಒತ್ತಾಯಿಸುವುದು (ಮಧ್ಯೆ ನೀರು ಕುಡಿಯಲು ಬಿಡುವುದಿಲ್ಲ)–ಇವನ್ನು ಮಾಡದಿದ್ದರೆ ಅದು ಮಾನುಷವಾಗಿ ಹೊಡೆಯುವುದು........

ಇಷ್ಟೆಲ್ಲ ಅನುಭವಿಸಿಯೂ ಓಡಿ ಹೋಗದೆ, ಸಾವು ಬದುಕಿ ಉಳಿದವನಿಗೆ, ಅರ್ಧ ವರ್ಷದ ಪರೀಕ್ಷೆಗೆ ಮೊದಲು, ಸಾವಿರಾರು ರೂ.ಗಳನ್ನು ಖರ್ಚುಮಾಡಿ ಭರ್ಜರಿ 'ಔತಣ' ಕೊಟ್ಟು ಸತ್ಕಾರ ಮಾಡುತ್ತಾರೆ; ಅನಂತರ ಚೆನ್ನಾಗಿ ನೋಡಿಕೊಳ್ಳುತ್ತಾರೆ!

### 'ಉಗ್ರಕ್ರಮ'

ಸರ್ಕಾರ ಈ ಪಿಡುಗನ್ನು ನಿವಾರಿಸಲು 'ಉಗ್ರಕ್ರಮ' ತೆಗೆದುಕೊಳ್ಳುವುದಂತೆ. ಸದ್ಯಕ್ಕೆ ಈ ಕ್ರಮಗಳು ದಾವಣಗೆರೆಯ ಮೆಡಿಕಲ್ ಕಾಲೇಜಿಗೆ ಅನ್ವಯವಾಗಿ, ನಂತರ ರಾಜ್ಯದ ಎಲ್ಲ ಕಡೆ ಬಳಕೆಗೆ ಬರುವುವಂತೆ. ಆ ಕ್ರಮಗಳೆಂದರೆ: ಕಾಲೇಜಿನ ಈಗಿನ ವಿದ್ಯಾರ್ಥಿಗಳಿಂದಲೂ ಹೊಸದಾಗಿ ಸೇರುವವರಿಂದಲೂ ಉತ್ತಮ ನಡತೆಯ ಬಗ್ಗೆ ಮುಚ್ಚಳಿಕೆ ಪಡೆಯುವುದು; ವಿದ್ಯಾರ್ಥಿಗಳ (ವಿದ್ಯಾರ್ಥಿನಿಯರ) ಪಠ್ಯೇತರ ಚಟುವಟಿಕೆಗಳ ಬಗ್ಗೆ ಅಧ್ಯಾಪಕರು ನಿಗಾ ಇಡುವುದು ಮತ್ತು ಸರ್ವಿಸ್ ರಿಕಾರ್ಡ್ ಇಡುವುದು; ಇತ್ಯಾದಿ.

ಆದರೆ ಈ ಕ್ರಮಗಳು ಎಷ್ಟರ ಮಟ್ಟಿಗೆ ಬಳಕೆಗೆ ಬರುತ್ತವೆಂಬುದು ಅನುಮಾನದ ಪ್ರಶ್ನೆ. ವಿದ್ಯಾರ್ಥಿಗಳ ಈ ಚಟುವಟಿಕೆಗಳ ಬಗ್ಗೆ ಸುಳಿವು ಕೊಡಲು ಭಯ; ಕ್ರಮ ತೆಗೆದುಕೊಂಡರೆ ವಿದ್ಯಾರ್ಥಿಗಳಿಂದಲೂ, ಅವರ ರಾಜಕೀಯ ಅಪ್ಪ-ಅಮ್ಮಂದಿರಿಂದಲೂ ಅಧ್ಯಾಪಕರಿಗೆ ಪ್ರತೀಕಾರದ ಭಯ; ಪ್ರಕರಣ ಪತ್ತೆಹಚ್ಚಿದರೆ ಅದನ್ನು ಸಾಬೀತು ಮಾಡಲು ಇರುವ ಕಷ್ಟ; ಪೋಲೀಸ್ ಮತ್ತು ನ್ಯಾಯಾಲಯದ ಕಾನೂನಿನ ಸಿಕ್ಕುಗಳು–ಈ ಎಲ್ಲದರ ನಡುವೆ ಯಾರು, ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೋ?

ವಿದ್ಯಾರ್ಥಿಗಳ ಮೇಲೆ ಅಧ್ಯಾಪಕರಿಗೆ ಇದ್ದ/ಇರುವ ಹತೋಟಿ ಈವರೆಗೆ ಒಂದಿಲ್ಲೊಂದು ರೀತಿ ದುರುಪಯೋಗ ಆಗಿರುವ ಉದಾಹರಣೆಗಳೇ ಹೆಚ್ಚು. ಈಗಿನ ಕ್ರಮಗಳು ಹಾಗಾಗುವುದಿಲ್ಲವೆಂದು ಖಾತ್ರಿಯೇನು?

### ತಂದೆ-ತಾಯಿಗಳು, ಸಮಾಜ

ವಿದ್ಯಾರ್ಥಿಗಳನ್ನು ನಿಯಂತ್ರಿಸುವಲ್ಲಿ ಎಲ್ಲರಿಗಿಂತ ಹೆಚ್ಚಿನ ಕರ್ತವ್ಯ ಮತ್ತು ಶಕ್ತಿ ಇರುವುದು ಅವರ ತಂದೆ–ತಾಯಿಗಳಿಗೆ ಮಾತ್ರ. ಆದರೆ ಇಂದು ಎಷ್ಟು ಜನರಿಗೆ ತಮ್ಮ ಮಕ್ಕಳ ಚಟುವಟಿಕೆಗಳನ್ನು ಗಮನಿಸಿ, ತಿದ್ದುವ ವ್ಯವಧಾನ, ಆಸಕ್ತಿ ಇದೆ? ಒಂದು ಕಡೆ ಅಶಿಕ್ಷಿತ ತಂದೆ–ತಾಯಿಗಳಾದರೆ, ಇನ್ನೊಂದು ಕಡೆ ತಮ್ಮ ಮಕ್ಕಳನ್ನು ಕಾಲೇಜಿಗೆ, ಅದರಲ್ಲೂ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಿಗೆ ಕಳಿಸುವುದು ಸಾಮಾಜಿಕ, ರಾಜಕೀಯ, ಮತ್ತು ಆರ್ಥಿಕ ಅಂತಸ್ತು ಮತ್ತು ಲಾಭದ ಪ್ರಶ್ನೆಯಾದ ತಂದೆ-ತಾಯಿಗಳು. ಇವರಂತೂ ಮಕ್ಕಳ ಮೇಲೆ ಅಧ್ಯಾಪಕರು ನಿಯಂತ್ರಣ ಹೇರಿದರೆ, ಕ್ರಮ ತೆಗೆದುಕೊಂಡರೆ ಯಾವುದೇ ರೀತಿಯಲ್ಲೂ ಪ್ರತೀಕಾರ ಮಾಡಿಯಾರು! ಈ ರೀತಿ ಚಿತ್ರಹಿಂಸೆಗೆ ಒಳಗಾಗುವವರು ಒಟ್ಟಾಗಿಯೋ, ಒಂಟಿಯಾಗಿಯೊ ಹಿಂಸಕರನ್ನು ಪ್ರತಿಭಟಿಸಲು, ಅವರಲ್ಲಿ ನ್ಯಾಯ-ನೀತಿಯುದಲ್ಲನಾದರೆ ಭಯದ ತಡೆಯನ್ನಾದರೂ ಒಡ್ಡಲು ಅಸಮರ್ಥರಾಗಿರುವ ಪರಿಸ್ಥಿತಿ ಇನ್ನೂ ಒಂದು ಕಡೆ.

ಕೊಳೆತು ಹುಳುಬಿದ್ದಿರುವ ಈ ನಮ್ಮ ಸಮಾಜದ ಇತರೆಲ್ಲ ಸಮಸ್ಯೆಗಳನ್ನು ಬಗೆಹರಿಸಲು ಬೇಕಾದ ಮನಃಸ್ಥಿತಿ, ದೃಷ್ಟಿಕೋನ ಸಮಾಜದಲ್ಲಿ ಮೂಡಿದಾಗಲೇ ರ್‍ಯಾಗಿಂಗ್ ಸಮಸ್ಯೆಗೂ ಪರಿಹಾರವೇ?

—ನಾಗರಾಜ್

[ರ್‍ಯಾಗಿಂಗ್ ಹಿಂದಿನ 'ತತ್ವ' ಮತ್ತು ಒಂದು ಪರಿಹಾರ ಮಾರ್ಗ ಕುರಿತು ಮುಂದಿನ ಸಂಚಿಕೆಯಲ್ಲಿ ಇನ್ನೊಂದು ಲೇಖನ ನಿರೀಕ್ಷಿಸಿ. –ಸಂ]

## ಓದುಗರ ಪತ್ರ

### ಮದ್ರಾಸು ಮಹಿಳೆಯರ ರ್‍ಯಾಲಿ: ನಮ್ಮವರಲ್ಲಿ ಎಚ್ಚರ ಮೂಡಿಸೀತೆ?

"ದೀವಟಿಗೆ" ಸಂಪಾದಕರಿಗೆ,

ಮಾನ್ಯರೆ,

೧೪–೨–೮೨ ರ 'ದೀವಟಿಗೆ' ಯಲ್ಲಿ 'ಮಹಿಳೆಯರ ರ್‍ಯಾಲಿ' ಎಂಬ ವರದಿ ಓದಿ, 'ಪರವಾಗಿಲ್ಲ; ಮಹಿಳೆಯರೂ ತಮಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಒಟ್ಟಾಗಿ ದನಿ ಎತ್ತುವಂತೆ ಆದರಲ್ಲ' ಅನ್ನಿಸಿತು. ಜೊತೆಗೇ ನಮ್ಮಲ್ಲಿನ ಚಿತ್ರ ಕಣ್ಮುಂದೆ ಬಂತು. ಮದ್ರಾಸಿನ ಮಹಿಳೆಯರು ಯಾವುದರ ವಿರುದ್ಧ ಪ್ರತಿಭಟಿಸಿದರೋ, ಅಂಥ ವಿಷಯಗಳು ತಮ್ಮ ಮೇಲೆ ನಡೆಯುವ ಅನ್ಯಾಯಗಳು ಎಂದು ಯೋಚಿಸುವಷ್ಟು ಶಕ್ತಿ ಬರಬೇಕಾದರೂ ನಮ್ಮ ಮಹಿಳೆಯರಿಗೆ ಇನ್ನೂ ಎಷ್ಟು ಕಾಲ ಬೇಕೋ ಏನೋ. ಇನ್ನು ನಮ್ಮ ಮಹಿಳಾ ಸಮಾಜ, ಯುವತಿ ಮಂಡಳಿಗಳ ಬಗ್ಗೆಯಂತೂ ಬರೆಯದಿರುವುದೇ ಒಳ್ಳೆಯದು– ಹಾಡು, ರಂಗೋಲಿ, ಭಜನೆ, ಸ್ಮರಣ ಸಂಚಿಕೆ–ಇಂಥ ಚಟುವಟಿಕೆಗಳಿಗೆ ಸೀಮಿತವಾದವುಗಳೇ ಹೆಚ್ಚು. ಇವರು, ತಮಿಳು ನಾಡಿನ ಹೆಣ್ಣುಗಳಂತೆ ಕೂಲಿಯವರು, ಕೊಳಚೆವಾಸಿಗಳು ಮುಂತಾದವರನ್ನೆಲ್ಲ ಸೇರಿಸಿಕೊಳ್ಳುವಷ್ಟು ಆಲೋಚನೆ ಬೆಳೆಸಿಕೊಂಡಾರೇ— ಎಂದು ಆಶ್ಚರ್ಯವಾಗುತ್ತದೆ.

ತೀರ್ಥಹಳ್ಳಿ. –ಸುಧಾ

## ಮಂಡೂಕ ಪುರಾಣ

[ನಮ್ಮ ೭–೨-೮೨ರ ಸಂಚಿಕೆಯಲ್ಲಿ 'ಓದುಗರ ಪತ್ರ!?' ಎಂಬ ತಲೆಬರಹದಡಿ ಓದುಗರಿಂದ ಪ್ರತಿಕ್ರಿಯೆ ಕೇಳಿದ್ದಕ್ಕೆ ಉತ್ತರವಾಗಿ ಕೆಲವು ಪ್ರತಿಕ್ರಿಯೆಗಳು ಬಂದಿವೆ. ಅವರಲ್ಲಿ ಎರಡನ್ನು ಪ್ರಕಟಿಸುತ್ತಿದ್ದೇವೆ.

ಇವು ಕೇವಲ ಹಾಸ್ಯ ಪ್ರಜ್ಞೆಯಿಂದ ಬರೆದದ್ದ /ಪ್ರಕಟಿಸಿದ್ದು ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತಿದ್ದೇವೆ.–ಸಂಪಾದಕ]

### "ಕತ್ತೆಯೂ ಮರಿ ಚಂದ!"

ಕತ್ತೆ ಮರಿಗಳು ನಲ್ಲಿಯಲ್ಲಿ ಬರುತ್ತವೆಂದು ಓದುಗರೊಬ್ಬರು ಹೇಳಿದ್ದರಲ್ಲಿ ತಪ್ಪೇನೂ ಇಲ್ಲವೇನೋ. ಏಕೆಂದರೆ ನಮ್ಮ ನ್ನಾಳುವವರು ಆ ರೀತಿ ಪರಕಾಯ ಪ್ರವೇಶ ಮಾಡಿ ಸಾಮಾನ್ಯ ಜನರ ಕಷ್ಟ ಸುಖ ತಿಳಿಯಲು ಬರುತ್ತಿರಬಹುದು!?

"ಕತ್ತೆಯ ಮರಿ ಚಂದ" ಅದನ್ನು ಸಾಕಿಕೊಳ್ಳಿ ಎಂದೂ ಅವುಗಳನ್ನು ನೀರಿನಲ್ಲಿ ಬಿಡುತ್ತಿರಬಹುದು. ಅಥವಾ ನೀರು ಕಡಿಮೆಯಾಗುತ್ತದೆ. ಕತ್ತೆ ಸಾಕಿ ದೊಡ್ಡ ಮಾಡಿ, ಅದರ ಮೇಲೆ ಬಟ್ಟೆ ಹೊರಿಸಿಕೊಂಡು ಹಳ್ಳಕ್ಕೆ ಹೋಗಿ; ಹಿಂದಕ್ಕೆ ಬರುವಾಗ ಅದರ ಮೇಲೆ ನೀರನ್ನೂ ಹೊರಿಸಿಕೊಂಡು ಮನೆಗೆ ತನ್ನಿ ಎಂಬರ್ಥವೂ ಇರಬಹುದು!?

**ಭವಾನಿ ಶಂಕರ್, ಎಂ. ಎ.**

### ಗೃಹಿಣಿ ಹೇಳಿದ್ದು

ಮಾನ್ಯ ಸಂಪಾದಕರೆ, ಏನೆಂದಿರಿ?
ನಲ್ಲಿಯಲಿ ಬಂದಿತೇ ಕ(ಪ್ಪೆ)ತ್ತೆ ಮರಿ?
ಯಾಕೆ ಬೇಡದ್ದೆಲ್ಲ ಬರೆಯುತೀರಿ?
ನೀರು ಬಂದರೆ ಮಾತ್ರ ವರದಿ ಮಾಡಿ!

**—ನಕ್ಷತ್ರಿಕ.**

## ಓದುಗರ ಪತ್ರಗಳು

# ಕಿಗ್ಗ ದೇವಸ್ಥಾನದ ನೌಕರರ ಬವಣೆ: ಕೆಲವು ಸಲಹೆಗಳು

'ದೀವಟಿಗೆ' ಸಂಪಾದಕರಿಗೆ,

ಮಾನ್ಯರೆ,

ಕಿಗ್ಗ ದೇವಸ್ಥಾನದ ನೌಕರರ ಮುಷ್ಕರದ ನಿರ್ಧಾರ ಕುರಿತು ನನ್ನ ಕೆಲವು ಅನಿಸಿಕೆಗಳನ್ನು ಬರೆಯುತ್ತಿದ್ದೇನೆ.

ಈ ನೌಕರರ ಬೇಡಿಕೆಗಳು ಅತ್ಯಂತ ನ್ಯಾಯಯುತವಾಗಿರುವುದು ನಿಜ. ಆದರೆ ಅವರು ಮುಷ್ಕರ ಹೂಡುವ ಮೊದಲು ಈ ಕೆಲವು ಅಂಶಗಳನ್ನು ಗಮನಿಸಿ, ಸಾಕಷ್ಟು ಪೂರ್ವಸಿದ್ಧತೆ ಮಾಡಿಕೊಳ್ಳಬೇಕೆಂದು ನನ್ನ ಅನಿಸಿಕೆ.

ಇವರ ಸಮಸ್ಯೆ ಈ ದೇವಸ್ಥಾನಕ್ಕೆ ಮಾತ್ರ ಸೀಮಿತವಾದದ್ದಲ್ಲ, ಬಹುಶಃ ಮುಜರಾಯಿ ಇಲಾಖೆಗೆ ಸೇರಿದ ಎಲ್ಲ ದೇವಸ್ಥಾನಗಳದ್ದೂ ಹೌದು. ಆದ್ದರಿಂದ ಅವರು ಇತರ ದೇವಸ್ಥಾನಗಳ ನೌಕರರ ಬೆಂಬಲವನ್ನು ಗಳಿಸಿಕೊಳ್ಳಬೇಕು.

ಎರಡನೆಯದಾಗಿ, ಕಿಗ್ಗ ದೇವಸ್ಥಾನದಲ್ಲಿ ವಿಶೇಷ ಸಂದರ್ಭಗಳಲ್ಲಿ ದಿನಗೂಲಿಗೆ ಕೂಡ ನೌಕರರನ್ನು ನೇಮಿಸಿಕೊಳ್ಳಲಾಗುತ್ತದೆ. ರಥ ಶೃಂಗಾರ ಮುಂತಾದ ಕೆಲಸಗಳು ಅನೂಚಾನವಾಗಿ ಕೆಲವು ನಿರ್ದಿಷ್ಟ ಜಾತಿಗಳವರ ಕರ್ತವ್ಯವೆಂಬಂತೆ ಆಗಿದೆ. ಹಿಂದೆ ಇವರ ಕೆಲಸ ಬಿಟ್ಟಿಯಾಗಿತ್ತು. ಇಂದೂ ಅದಕ್ಕೆ 'ಬಿಟ್ಟಿ' ಎಂದೇ ಹೆಸರಿದೆ. ಇತ್ತೀಚೆಗೆ ಅವರಿಗೂ ದಿನಗೂಲಿ ನೀಡಲಾಗುತ್ತಿದ್ದರೂ ಅದು ಅತ್ಯಂತ ಕನಿಷ್ಠವಾಗಿರುವುದರಿಂದ ಅವರ ಕೆಲಸ ಬಿಟ್ಟಿಯೆಂದೇ ಹೇಳಬಹುದು. ಅಲ್ಲದೆ ರಥ-ಶೃಂಗಾರದಂತಹ ಕಷ್ಟಕರ ಕೆಲಸ ಮಾಡುವಾಗ ಯಾರಾದರೂ ಅಪಾಯಕ್ಕೊಳಗಾದರೆ ಅವರಿಗೆ ಯಾವ ರೀತಿಯ ಭದ್ರತೆ ಅಥವಾ ಪರಿಹಾರ ಇಲ್ಲ. ಇವರು ತಮ್ಮ ಸ್ಥಿತಿ ಉತ್ತಮಪಡಿಸಿಕೊಳ್ಳಲು ಪ್ರತಿಭಟಿಸಿದರೂ ಅಸಹಕ್ತರಸ್ಥರಾದ ಇವರನ್ನು ದೇವರ ಭಯದ ಕಡಿವಾಣ ಹಾಕಿಯೋ ಅಥವಾ ಯಾವುದಾದರೂ ರೀತಿ ಪುಸಲಾಯಿಸಿಯೋ ನಿಯಂತ್ರಿಸಲಾಗುತ್ತದೆ.

ಖಾಯಂ ನೌಕರರ ಮುಷ್ಕರಕ್ಕೆ ಬಲ ಬರಬೇಕಾದರೆ ಈ ಹಂಗಾಮಿ ನೌಕರರ ಕುಂದುಕೊರತೆಗಳನ್ನೂ ತಮ್ಮ ಬೇಡಿಕೆಗಳ ಜೊತೆ ಸೇರಿಸಿಕೊಂಡು ಹೋರಾಡಬೇಕಾಗುತ್ತದೆ.

ಮೂರನೆಯದಾಗಿ ಈ ದೇವಸ್ಥಾನ ಮತ್ತು ಅದರ ಆದಾಯಗಳು ಈಗ ಸರ್ಕಾರಕ್ಕೆ ಸೇರಿರುವುದರಿಂದ ಅದರ ಅಭಿವೃದ್ಧಿಯ ಹೊಣೆ ಮತ್ತು ಖರ್ಚು ವೆಚ್ಚಗಳೂ ಸರ್ಕಾರದ್ದೇ ಆಗುತ್ತವೆ. ಆದ್ದರಿಂದ, ದೇವಸ್ಥಾನದ ವಾರ್ಷಿಕ ಖರ್ಚು ವೆಚ್ಚಗಳನ್ನು ತೂಗಿಸಲು ಈಗ ಸಾರ್ವಜನಿಕರಿಂದಲೂ ಹಣ (ಚಂದಾ) ಸಂಗ್ರಹಿಸುವುದನ್ನು ನಿಲ್ಲಿಸಿ, ಸರ್ಕಾರವನ್ನೇ ಒತ್ತಾಯಿಸಲು ನೌಕರರು ಮತ್ತು ಆಡಳಿತ ವರ್ಗ ಮುಂದಾಗಬೇಕು. [ಆದರೆ, ಸರ್ಕಾರವೆಂದರೆ ಜನರಿಂದ ಬೇರೆಯಾದ ಒಂದು ಯಂತ್ರ ಅಥವಾ ಅದೊಂದು ಬೇರೆಯೇ ಲೋಕ ಎಂಬಂಥ ಪರಿಸ್ಥಿತಿ ನಮ್ಮ ದೇಶದಲ್ಲಿ ಇದೆ. ಜನತೆಯು ಪ್ರತಿನಿಧಿಗಳನ್ನು ಆರಿಸಿ, ಆಡಳಿತ ನಡೆಸಲು ಕಳಿಸಿದಲ್ಲಿ ಸ್ವರ್ಗದಂತಹ ಪ್ರತ್ಯೇಕ ಲೋಕಕ್ಕೆ ಕಳಿಸಿದಂತೆ ಆಗುತ್ತಿದೆ.]

ದೇವಸ್ಥಾನ ಉಳಿಯಲೇಬೇಕಾದ ಅಗತ್ಯ ಇದ್ದಲ್ಲಿ ಆಡಳಿತ ವರ್ಗ ಮತ್ತು ನೌಕರರು ಈ ದಿಕ್ಕಿನಲ್ಲಿ ಯೋಚಿಸಿ, ಜಾತಿ ಮತ ಭೇದವಿಲ್ಲದೆ ಸಾರ್ವಜನಿಕರ ಬಲವನ್ನೂ ಪಡೆಯಬೇಕು. ಇದು ಕೇವಲ ಒಂದು ಗುಂಪಿನ ಹೋರಾಟವಾಗಬಾರದು, ಎಲ್ಲ ಜನರ ಹೋರಾಟವಾಗಬೇಕು. ಆಗಲೇ ಅದಕ್ಕೆ ಜಯ ಲಭಿಸೀತು. ಇಲ್ಲವಾದರೆ ಅನೇಕ ಚಳುವಳಿಗಳಂತೆ ಇದೂ ಹುಸಿಯಬಹುದು. ಜನತೆಯ ಬೆಂಬಲ ಪಡೆಯದ ಯಾವ ಹೋರಾಟವೂ ಈವರೆಗೆ ಯಶಸ್ವಿಯಾಗಿಲ್ಲ. ಆಗುವುದಿಲ್ಲ.

ಶಿವಮೊಗ್ಗ. ಪಿ. ರಾಘವೇಂದ್ರ.

## ಇಲ್ಲೂ ಅಮಾನವೀಯತೆ

ಶಂಕರ್ ಬಾಗೇಶ್‌ಪುರ್ ಅವರ ಲೇಖನದಲ್ಲಿ (ದೀವಟಿಗೆ, ೭-೧-೮೩) ಸ್ಟೈಪೆಂಡರಿಗಳ ಬಗ್ಗೆ ಕೆಲವು ಹಿರಿಯ ನೌಕರರು ಅಮಾನವೀಯವಾದ ರೀತಿಯಲ್ಲಿ ನಡೆದುಕೊಳ್ಳುತ್ತಾರೆ ಎಂದಿದೆ. ಈ ಪ್ರವೃತ್ತಿ ಅವರಿಗೆ ಮಾತ್ರವಲ್ಲ, ಹಲವಾರು ಕಡೆಗಳಲ್ಲಿನ 'ಪ್ರೊಬೇಶನರ್' (ತರಬೇತಿ ಅವಧಿಯವರು) ಗಳ ಬಗೆಗೂ ವ್ಯಕ್ತವಾಗುತ್ತದೆ. ಪ್ರೊಬೇಶನ್ ಅವಧಿಯವರ ಕೈಲಿ ತಮ್ಮೆಲ್ಲಾ ಕೆಲಸ ಮಾಡಿಸುತ್ತಾ, ತಮ್ಮ ಕೆಲಸ ಬಾಕಿ ಉಳಿಸಿ ಅವರಿಗೆ ಬಯ್ಯುತ್ತಾ ತೊಂದರೆ ಕೊಡುವ ಎಷ್ಟೋ ಜನ 'ಹಿರಿಯ'ರೂ ಇದ್ದಾರೆ.

ಅಂದ ಮಾತ್ರಕ್ಕೆ ಎಲ್ಲರೂ ಹೀಗೆ ಎಂದೇನೂ ಅಲ್ಲ. ತರಬೇತಿಯವರನ್ನೂ ಕಿರಿಯರನ್ನೂ ಪ್ರೀತಿ ವಿಶ್ವಾಸಗಳಿಂದ ನಡೆಸಿಕೊಂಡು ಅವರಿಗೆ ಒಳ್ಳೆಯ ಮಾರ್ಗದರ್ಶನ ಕೊಡುವವರೂ ಬಹಳ ಜನ ಇದ್ದಾರೆ.

—ಕಣ್ಣೀರ.

## ಸ್ಟೈಪೆಂಡರಿಗಳ ಪರಿಸ್ಥಿತಿ: ಒಂದು ವಿವರಣೆ

ಫೆ. ೭ ರ 'ದೀವಟಿಗೆ' ಯಲ್ಲಿ ಪ್ರಕಟವಾದ ನನ್ನ ಲೇಖನದಲ್ಲಿ ಸ್ಟೈಪೆಂಡರಿ ಪದವೀಧರರ ಜೊತೆ ಕೆಲವರು ಅಮಾನವೀಯವಾಗಿ ನಡೆದುಕೊಳ್ಳುವ ಬಗ್ಗೆ ಬರೆದಿದ್ದೆನಷ್ಟೆ. ಇದರಿಂದ ಕೆಲವರು ವೈಯಕ್ತಿಕವಾಗಿ ನೊಂದುಕೊಳ್ಳುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ.

ಸ್ಟೈಪೆಂಡರಿಯವರ ಜೊತೆ ಎಲ್ಲರೂ ಎಲ್ಲ ಕಡೆಯೂ ಹೀಗೇ ನಡೆದುಕೊಳ್ಳುತ್ತಿದ್ದಾರೆಂದು ನನ್ನ ಅಭಿಪ್ರಾಯವಲ್ಲ. ನಮ್ಮೊಡನೆ ಬಹಳ ಮಾನವೀಯವಾಗಿ ವರ್ತಿಸುತ್ತ, ನಮಗೆ ಒಳ್ಳೆಯ ಮಾರ್ಗದರ್ಶನ, ಸಹಕಾರ ನೀಡುವವರೂ ಬೇಕಷ್ಟು ಮಂದಿ ಇದ್ದಾರೆ. ಆದರೆ ನಮ್ಮ ಅತಂತ್ರದ, ಹೀನ ದೀನ ಪರಿಸ್ಥಿತಿಯ ಬಗ್ಗೆ ಬರೆಯುವಾಗ, ಕೆಲವೆಡೆ ಇಂಥ ನಡವಳಿಕೆಯೂ ಇರುವುದನ್ನಷ್ಟೇ ನಾನು ಪ್ರಸ್ತಾಪಿಸಿದ್ದೆ. ಯಾರನ್ನೂ ವೈಯಕ್ತಿಕವಾಗಿ ಕುರಿತು ಬರೆದದ್ದಲ್ಲ. ಕ್ಷಮಿಸಿ.

—ಶಂಕರ್ ಬಾಗೇಶ್‌ಪುರ್.

## ವಿದ್ಯುತ್ ಅಭಾವ.......

(೧ನೇ ಪುಟದಿಂದ)

ವಿದ್ಯುತ್ ಮಂಡಳಿಯ ಸ್ಥಳೀಯ ಸೆಕ್ಷನ್ ಆಫೀಸರ್ ಅಂಜನಾಮೂರ್ತಿಯವರು ಸಭಿಕರ ಪ್ರಶ್ನೆಗಳಿಗೆ ಉತ್ತರಕೊಟ್ಟು, ಈ ರೀತಿಯ ಅವ್ಯವಸ್ಥೆಯ ವಿಷಯದಲ್ಲಿ ತಮ್ಮ (ಸ್ಥಳೀಯ) ಕಚೇರಿಯ ಅಸಹಾಯಕತೆಯನ್ನು ವಿವರಿಸಿದರು. ಈ ಪ್ರದೇಶಕ್ಕೆ ಶಿವಮೊಗ್ಗದಿಂದಲೇ ಸರಿಯಾಗಿ ವಿದ್ಯುತ್ ಸರಬರಾಜು ಆಗುತ್ತಿಲ್ಲ; ಕೆಲವೊಮ್ಮೆ ತಮಗೇ ಗೊತ್ತಿಲ್ಲದೆ ವಿದ್ಯುತ್ ನಿಲ್ಲಿಸಲಾಗುತ್ತಿದೆ ಎಂದರು. ಆಸ್ಪತ್ರೆಗಳಿಗೆ ವಿನಾಯ್ತಿ ಏನೂ ನೀಡಿಲ್ಲನೆಂದ ಅವರು, ಪುರಸಭೆಯು ಸಿಗದಾಳಿನ ನೀರೆತ್ತುವ ಪಂಪ್‌ಹೌಸ್ ಬಳಿ ಪ್ರತ್ಯೇಕ ಟ್ರಾನ್ಸ್‌ಫಾರ್ಮರನ್ನು ಮುಂದಿನ ತಿಂಗಳ ಹೊತ್ತಿಗೆ ಜೋಡಿಸಿಕೊಡುವ ಭರವಸೆ ಕೊಟ್ಟರು. ಶರಾವತಿ, ಲಿಂಗನಮಕ್ಕಿಗಳಲ್ಲಿ, ಕೆಲವು ಉತ್ಪಾದಕ ಯಂತ್ರಗಳು ಕೆಟ್ಟಿದ್ದು ರಾಜ್ಯದಲ್ಲಿ ಅಗತ್ಯವಿರುವ ೩೭ ಮಿಲಿಯ ಯುನಿಟ್ಟುಗಳಿಗೆ ಪ್ರತಿಯಾಗಿ ಹಾಲಿ ೨೦-೨೨ ಮಿ, ಯುನಿಟ್ಟುಗಳು ಲಭ್ಯವಾಗುತ್ತಿವೆ. ಆದ್ದರಿಂದ ಈ ಅಭಾವ ಸ್ಥಿತಿ ಕನಿಷ್ಠಪಕ್ಷ ಬರುವ ಜೂನ್‌ವರೆಗಾದರೂ ಮುಂದುವರಿಯಬಹುದೆಂಬ ಮುನ್ಸೂಚನೆ ನೀಡಿದರು. ೧೯೮೩ರ ಹೊತ್ತಿಗೆ ಇಲ್ಲಿಗೆ ವಿದ್ಯುತ್ತಿನ ಮುಖ್ಯ ಮಾರ್ಗ ಜೋಡಿತಾನ ಹರಿಹರಪುರ, ವ. ರಾ. ಪುರಗಳೂ ಸೇರಿದಂತೆ ಈ ಪ್ರದೇಶದ ವಿದ್ಯುತ್ ಬವಣೆ ಕಮ್ಮಿಯಾಗುವುದೆಂದು ಅವರು ಆಶ್ವಾಸನೆ ನೀಡಿದರು.

ಮೋಟರ್ ಕೇವಣಿ ಅಕ್ರಮವೆಂದು ನಿರ್ಣಯಿಸಿದ ಸಭೆ, ಈಗಾಗಲೇ ಆ ಬಗ್ಗೆ ಹಲವಾರು ಜನ ಹೈ ಕೋರ್ಟಿಗೆ ರಿಟ್ ಹಾಕಿಸಿರುವುದರಿಂದ ಸರ್ಕಾರದ ಮುಂದಿನ ಕ್ರಮ ನಿರ್ಧಾರವಾಗುವವರೆಗೆ ಕೇವಣಿ ಕಟ್ಟಬಾರದೆಂದು ಬಳಕೆದಾರರಲ್ಲಿ ವಿನಂತಿಸಿತು. ಅಲ್ಲದೆ, ವಿದ್ಯುತ್ ಮಂಡಳಿಯ ತೊಂದರೆಗಳನ್ನು ಪರಿಹರಿಸಿ, ವಿದ್ಯುತ್ ಅಭಾವವನ್ನು ನೀಗಿಸುವಲ್ಲಿ ಶಾಸಕರು, ಮಂತ್ರಿಗಳು ಶ್ರಮಿಸಬೇಕೆಂದೂ, ಆ ಬಗ್ಗೆ ಸ್ಥಳೀಯ ಮುಖಂಡರು ಸಂಬಂಧಪಟ್ಟವರನ್ನು ಒತ್ತಾಯಿಸಬೇಕೆಂದೂ ಸಭೆ ನಿರ್ಣಯಿಸಿತು.

ಪಕ್ಷಗಳ ಭೇದವಿಲ್ಲದೆ ಎಲ್ಲ ರಂಗಗಳ ವಿದ್ಯುತ್ ಬಳಕೆದಾರರೂ ಭಾಗವಹಿಸಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಮೊಹಮದ್ ಸಾದಿಕ್ ವಹಿಸಿದ್ದರು. ಇಷ್ಟು ತೀವ್ರವಾದ ಸಮಸ್ಯೆಯ ಬಗ್ಗೆ ಚರ್ಚಿಸಲು ಸಭೆ ಕರೆದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಬಳಕೆದಾರರು— ಅದರಲ್ಲೂ ವಿದ್ಯಾವಂತ ಮತ್ತು ವಾಣಿಜ್ಯ ಬಳಕೆದಾರರು ಭಾಗವಹಿಸದಿದ್ದ ಬಗ್ಗೆ ಹಲವರು ಕಟುವಾಗಿ ಟೀಕಿಸಿದರು.

## ನೀರು ಪೂರೈಕೆ ಬಗ್ಗೆ ವಿವರಣೆ

( ೧ನೇ ಪುಟದಿಂದ )

### ಯೋಜನೆಗಳು

ಈಗಿರುವ ಟ್ಯಾಂಕಿನ ಜೊತೆಗೆ ೧ ಲಕ್ಷ ಗ್ಯಾಲನ್ ನೀರು ಹಿಡಿಸುವ ಇನ್ನೊಂದು ಟ್ಯಾಂಕು ಹಾಗೂ ಎರಡಕ್ಕೂ ಸೇರಿದಂತೆ ಸೋಸುವ ತೊಟ್ಟಿ – ಇವುಗಳ ನಿರ್ಮಾಣಕ್ಕಾಗಿ ಒಂದು ಅಂದಾಜು (ಎಸ್ಟಿಮೇಟ್) ತಯಾರಿಸಿ ಕೊಡಲು ಚಿಕ್ಕಮಗಳೂರಿನಲ್ಲಿರುವ ನಗರ ನೀರು ಸರಬರಾಜು ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ರನ್ನು ಕೇಳಲಾಗಿದೆ. ಅದು ಬಂದ ನಂತರ, ಅಂದಾಜು ವೆಚ್ಚ ಪುರಸಭೆಯ ಮಿತಿಯಲ್ಲಿದ್ದರೆ ಕೂಡಲೇ ಕಾಮಗಾರಿ ಕೈಗೊಳ್ಳಲಾಗುವುದು. ಹೆಚ್ಚಿದ್ದರೆ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ನೀರು ಸರಬರಾಜಿಗೆ ಮುಂದಾಲೋಚನೆಯಿಂದ ಯೋಜನೆ ಹಾಕಿಕೊಳ್ಳುವಂತೆ ಜಿಲ್ಲಾಧಿಕಾರಿಗಳೂ ತಮ್ಮ ತನಿಖಾ ವರದಿಯಲ್ಲಿ ಈ ಹಿಂದೆಯೇ ಸೂಚಿಸಿದ್ದಾರೆ ಎಂದೂ ಅವರು ಹೇಳಿದರು.

ಅಂದರೆ, ಈಗ 'ಬೇಕಿ' ಸಮರಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿಯಲ್ಲಿದೆ. ಅದನ್ನು ಕಿತ್ತು, ಊರಿಗೆ ಯಥೇಚ್ಛವಾಗಿ ಶುದ್ಧ ನೀರು ಹರಿಸಲು ಊರಿನ, ತಾಲೂಕಿನ ಮುಖಂಡರು ಮುತುವರ್ಜಿ ವಹಿಸ ಬೇಕಾಗಿದೆ.

# ಸುದ್ದಿ ಸಂಗ್ರಹ

### ಕಾಮುಕನ ಕೊಲೆ

ಅಮೃತಸರ ನಗರದ ೨೧ ವರ್ಷದ ಯುವತಿಯೊಬ್ಬಳು ತನ್ನ ಮೇಲೆ ಲೈಂಗಿಕ ಅತ್ಯಾಚಾರ ನಡೆಸಲು ಯತ್ನಿಸಿದ ಸಿಖ್ ಯುವಕನನ್ನು ಕೊಂದು ಹಾಕಿದ್ದಾಗಿ ವರದಿಯಾಗಿದೆ.

### ೩ನೇ ದರ್ಜೆ ನೌಕರರ ನೇಮಕದ ಹೊಣೆ ಲೋಕಸೇವಾ ಆಯೋಗಕ್ಕೆ

ರಾಜ್ಯದಲ್ಲಿ ತೃತೀಯ ದರ್ಜೆ ನೌಕರರ ನೇಮಕಾತಿಯನ್ನು ಲೋಕಸೇವಾ ಆಯೋಗ ನಡೆಸುತ್ತಿದ್ದು, ೧೯೮೧ರ ಜುಲೈನಿಂದ ಅದನ್ನು ಸರ್ಕಾರ ಮರಳಿಸಿಕೊಂಡಿತ್ತು. ಈಗ ಪುನಃ ಆಯೋಗಕ್ಕೇ ಮರಳಿಸಿದೆ.

೧೯೮೧ರ ಜುಲೈ ೩ಕ್ಕೆ ಮುಂಚೆ ಕೆಲಸ ಮುಗಿದಿದ್ದರೂ ಆಯ್ಕೆ ಮುಗಿಯದಿದ್ದ ಸಂದರ್ಭದಲ್ಲೂ, ೧೯೮೨ರ ಡಿಸೆಂಬರಿನಲ್ಲಿ ನಡೆದ ಪರೀಕ್ಷೆಯ ಆಧಾರದ ಮೇಲೂ ಆಯ್ಕೆಯ ಕೆಲಸವನ್ನು ಆಯೋಗವೇ ಮಾಡಲಿದೆ.

# ಆರೆಸ್ಸೆಸ್ಸಿನ ಸಹಚಿಂತನ ಕಾರ್ಯಕ್ರಮ

ಕೊಪ್ಪ: ರಾ.ಸ್ವ.ಸಂಘದವರು ಏರ್ಪಡಿಸಿದ್ದ 'ಸಹಚಿಂತನ' ಕಾರ್ಯಕ್ರಮ ಇಲ್ಲಿ ಫೆ. ೧೨ರಂದು ನಡೆಯಿತು.

ರಾಜ್ಯಪ್ರಚಾರಕ ನ. ಕೃಷ್ಣಪ್ಪ ಮಾತನಾಡಿ, ಹಿಂದೂ ಧರ್ಮಕ್ಕೆ ಎದುರಾಗಿರುವ ಆತಂಕಕರ ಪರಿಸ್ಥಿತಿಯನ್ನು ವಿವರಿಸಿದರು. ಹಿಂದೂ ಸಂಸ್ಕೃತಿಯ ರಕ್ಷಣೆಗಾಗಿ ವಿಶ್ವ ಹಿಂದೂ ಪರಿಷತ್ ೫೦೦ ಜನ 'ಹಿಂದೂ ಮಿಶನರಿ'ಗಳನ್ನು ತರಬೇತುಮಾಡಿ ಕೆಲಸಕ್ಕೆ ಹಚ್ಚುವ ೧೦ ಕೋಟಿ ರೂ.ಗಳ ಯೋಜನೆಯೊಂದನ್ನು ಹಾಕಿಕೊಂಡಿದ್ದು, ಅವಕ್ಕಾಗಿ ಎಲ್ಲ ಹಿಂದುಗಳೂ ಉದಾರವಾಗಿ ಧನ ಸಹಾಯ ಮಾಡಬೇಕೆಂದು ವಿನಂತಿಸಿದರು.

ಮತಾಂತರಕ್ಕೆ ಆರ್ಥಿಕ ದುಸ್ಥಿತಿಗಿಂತ ಧರ್ಮಶ್ರದ್ಧೆಯ ಕೊರತೆ, ಸ್ವಾರ್ಥ ಮತ್ತು ಅಸ್ಪೃಶ್ಯತೆಯ ಅಪಮಾನಗಳು ಕಾರಣ ಎಂದು ಅವರು ತಮ್ಮ ಭಾಷಣ ಮತ್ತು ನಂತರ ಪ್ರಶ್ನೋತ್ತರದ ಸಮಯದಲ್ಲಿ ತಿಳಿಸಿದರು. ಅಸ್ಪೃಶ್ಯತೆ ನಿವಾರಣೆ ತಮ್ಮ ತಮ್ಮ ಮನೆಗಳಿಂದ ಆರಂಭವಾಗಬೇಕೆಂದು ಅವರು ಕರೆಕೊಟ್ಟರು. ಕೇರಳದಲ್ಲಿ ಅಸ್ಪೃಶ್ಯತೆಯನ್ನು ಸಂಪೂರ್ಣ ತೊಡೆದು ಹಾಕಲಾಗಿದೆ ಎಂದ ಅವರು ದಕ್ಷಿಣಕನ್ನಡದಲ್ಲೂ ಅದು ಇಲ್ಲ ಎಂದು ತಿಳಿಸಿದರು.

## ಕಾವ್ಯ ಸಂಜೆ

ಕೊಪ್ಪ: ಇಲ್ಲಿನ ಸರಕಾರಿ ಕಿರಿಯ ಕಾಲೇಜಿನಲ್ಲಿ ಫೆ. ೯ರಂದು 'ಕಾವ್ಯ ಸಂಜೆ' ಕಾರ್ಯಕ್ರಮ ನಡೆಯಿತು. ಪ್ರೌಢಶಾಲಾ ನಿವೃತ್ತ ಉಪಾಧ್ಯಾಯ, ಕವಿ, ವಿ. ಎಂ. ಮುತ್ತಯ್ಯನವರ 'ನಿಸರ್ಗನಿನಾದ ಮತ್ತು ಇತರ ಕವನಗಳು' ಎಂಬ ಕವನಸಂಕಲನದ ವಿಮರ್ಶೆ ನಡೆಯಿತು.

ಕೃತಿಯನ್ನು ಕುರಿತು ಮಾತನಾಡಿದ ಪ್ರಾಚಾರ್ಯ ಕೆ. ಎನ್. ನಾರಾಯಣ ಸ್ವಾಮಿ, ಅಧ್ಯಾಪಕರಾದ ಹೆಚ್. ಬಿ. ಹನುಮಪ್ಪ, ಶಿವನಂಜಯ್ಯ, ಮಲ್ಲಿಕಾರ್ಜುನ ಭಟ್ ಮತ್ತು ರಾಮರಾವ್ ಅವರುಗಳು, ಕವಿಯ ಸಾಧನೆಯನ್ನು ಶ್ಲಾಘಿಸುತ್ತ, ಅದು ಸಾರ್ಥಕವಾಗಬೇಕಾದರೆ ಸಹೃದಯ ಓದುಗರು ಕೃತಿಯನ್ನು ಕೊಂಡು ಓದುವುದೂ ಮುಖ್ಯ ಎಂದರು.

ಎಸ್. ಎಸ್. ವಿಶ್ವೇಶ್ವರ್ ಸ್ವಾಗತಿಸಿದರು. ಮುತ್ತಯ್ಯ ವಂದಿಸಿದರು.

## ಶೃಂಗೇರಿ ಬಾಲಿಕಾಪ್ರೌಢಶಾಲೆ 'ತಳಿರು'ಗೆ ಮೊದಲ ಪ್ರಶಸ್ತಿ

ಶೃಂಗೇರಿ: ವಿದ್ಯಾರ್ಥಿ ಕ್ಷೇಮ ನಿಧಿಯ ಆಶ್ರಯದಲ್ಲಿ ಫೆ. ೭ರಂದು ಇಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ತಾಲೂಕು ಮಟ್ಟದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಮಾರಂಭದ ಅಧ್ಯಕ್ಷತೆಯನ್ನು ಬಾಲಿಕಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಬಾಲಕೃಷ್ಣ ವಹಿಸಿದ್ದರು. 'ಫ್ಲಾಶ್ ಎಸೋಸಿಯೇಶನ್' ಕಾರ್ಯದರ್ಶಿ ಜಯೇಶ್ ಮುಖ್ಯ ಅತಿಥಿಗಳಾಗಿದ್ದರು.

ಬಾಲಿಕಾ ಪ್ರೌಢಶಾಲೆಯ ವಾರ್ಷಿಕ ಸಂಚಿಕೆ 'ತಳಿರು' ತಾ॥ ಮಟ್ಟದ ಪ್ರಥಮ ಬಹುಮಾನ ಪಡೆಯಿತು.

### ದೇಶ ಬೇರೆ, ಜಾತಿ ಒಂದೇ

ಕೊಪ್ಪ: 'ದೀವಟಿಗೆ'ಯ ೧೪-೨-೮೨ ರ ಸಂಚಿಕೆಯಲ್ಲಿ ಪ್ರಕಟವಾಗಿರುವಂತೆ ಭೀಮ್ ಬಹದ್ದೂರ್ ಮತ್ತು ಸರಸ್ವತೀಬಾಯಿ ಅವರದು ಅಂತರ್ಜಾತಿ ವಿವಾಹ ಅಲ್ಲವೆಂದೂ, ದೇಶ ಬೇರೆಯಾದರೂ ಜಾತಿ ಒಂದೇ ಎಂದೂ ತಿಳಿದು ಬಂದಿದೆ. ಉದ್ದೇಶಿತವಲ್ಲದ ತಪ್ಪಿಗಾಗಿ ವಿಷಾದಿಸುತ್ತೇವೆ. –ಸಂ.

### ರಾಘವೇಂದ್ರ ಟೀಮಿಗೆ ಕ್ರಿಕೆಟ್ ಜಯ

ಕೊಪ್ಪ: ಇಲ್ಲಿನ ರಾಘವೇಂದ್ರ ಕ್ರಿಕೆಟ್ ಟೀಮಿನವರು ಅಬೂಬಕರ್ ಅವರ ಉತ್ತಮ ಬೌಲಿಂಗ್ ಮತ್ತು ಸತೀಶ್ ಅವರ ಬಿರುಸಿನ ಬ್ಯಾಟಿಂಗ್ (೬೬) ನೆರವಿನಿಂದ ಫೆ. ೧೧ ರಂದು ಹರಿಹರಪುರದ ಡೈಮಂಡ್ ಟೀಮಿನ ಮೇಲೆ ೫೭ ರನ್ನುಗಳ ಜಯಗಳಿಸಿದರು.

## ಉದ್ಯೋಗ ವಾರ್ತೆ

I ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ೧೦೦ ಇಂಗ್ಲಿಷ್ ಬೆರಳಚ್ಚುಗಾರರ ಹುದ್ದೆಗಳಿಗೆ ಅರ್ಜಿ ಕರೆದಿದೆ. ಕಡೇತಾರೀಖು ೩೧-೩-೮೨ ವಿವರಗಳಿಗೆ ೧೧-೨-೮೨ ರ ಗೆಜೆಟ್ ನೋಡಿ.

II ಬೆಂಗಳೂರಿನ ಚೀಫ್ ಮಾರ್ಕೆಟಿಂಗ್ ಆಫೀಸರ್ ಈ ಕೆಳಗಿನ ಹುದ್ದೆಗಳಿಗೆ ಅರ್ಜಿ ಕರೆದಿದ್ದಾರೆ: ರಸಾಯನ ಶಾಸ್ತ್ರಜ್ಞ (೧೧) ಪ್ರ. ದ. ಗುಮಾಸ್ತರು (೪೭), ಶೀಘ್ರಲಿಪಿಗಾರರು (೭), ೨ನೇ ದರ್ಜೆ ಗುಮಾಸ್ತರು (೨೭), ಬೆರಳಚ್ಚುಗಾರರು/ ಗುಮಾಸ್ತರ (೫೧).

III ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿಯಿಂದ ಈ ಹುದ್ದೆಗಳಿಗೆ ಅರ್ಜಿ ಕರೆದಿದೆ: ಪ್ರ. ದ. ಗುಮಾಸ್ತ (೧೦), ೨ನೇ ದರ್ಜೆ ಗುಮಾಸ್ತ(೧೦), ೨ನೇ ದರ್ಜೆ ಬೆರಳಚ್ಚುಗಾರ/ಗುಮಾಸ್ತ (೨೪).

II ಮತ್ತು III ಎರಡಕ್ಕೂ ಕಡೇ ತಾರೀಖು ೨೭.೨.೮೨. ಗೆಜೆಟ್ ೪.೨.೮೨.



**ಕೊಪ್ಪ ಪುರಸಭಾ ಕಾರ್ಯಾಲಯದಿಂದ**

# ಪ್ರಕಟಣೆ.

ನಂ. ಮುನಸಿಆರ್ 282/81-82 ತಾ. 12.2.82.

**ವಿಷಯ:** 1982–83 ನೇ ಸಾಲಿನ ಲೀಸ್ ಅಕ್ಷನ್ ನೋಟಿಫಿಕೇಶನ್

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಕೊಪ್ಪ ಟೌನ್ ಪುರಸಭೆಯ ವ್ಯಾಪ್ತಿಯೊಳಗೆ ದಿನಾಂಕ 1-4-1982 ರಿಂದ 31-3-1983ರ ವರೆಗೆ ಅಂದರೆ ಒಂದು ವರ್ಷ ಕಾಲಾವಧಿಗೆ ಈ ಪುರಸಭೆಗೆ ಸೇರಿದ ಈ ಕೆಳಕಂಡ ಬಾಬನ್ನು ದಿನಾಂಕ 14-3-1982ರ ಭಾನುವಾರ ಬೆಳಿಗ್ಗೆ 11-00 ಘಂಟೆಗೆ ಪುರಸಭಾ ಕಾರ್ಯಾಲಯದಲ್ಲಿ ಪುರಸಭೆಯ ಅಧ್ಯಕ್ಷರು– ಮುಖ್ಯಾಧಿಕಾರಿಗಳು ಅಥವಾ ಅವರಿಂದ ಅಧಿಕಾರ ಪಡೆದವರಿಂದ ಬಹಿರಂಗ ಹರಾಜು ಮೂಲಕ (ಮಾಹೆಯಾನ ಲೈಸೆನ್ಸ್ ಫೀ ಮೇರೆಗೆ) ಪುರಸಭೆಯು ವಿಧಿಸುವ ಷರತ್ತಿಗೆ ಒಳಪಟ್ಟು ವಿಲೇವಾರಿ ಮಾಡಲಾಗುತ್ತದೆ. ಇಷ್ಟವುಳ್ಳವರು ಈ ಲೀಸ್ ಅಕ್ಷನ್‌ನಲ್ಲಿ ಭಾಗವಹಿಸಿ ಪಡೆಯಬಹುದು.

ಹರಾಜು ಮಾಡುವ ಬಾಬುಗಳ ವಿವರಗಳು:

1) ಸ್ಲಾಟರ್ ಹೌಸಿನಲ್ಲಿ ಆಡು ಮತ್ತು ಕುರಿಗಳನ್ನು ಕಡಿಯುವ ಮತ್ತು ಅವುಗಳ ಮಾಂಸವನ್ನು ಮಾರಾಟ ಮಾಡುವ ಹಕ್ಕುಗಳನ್ನು ಮಾರ್ಕೆಟ್ ರಸ್ತೆಯಲ್ಲಿರುವ 2 ಮಾಂಸದ ಅಂಗಡಿಗಳು, ಮೇಗಲ ಪೇಟೆಯಲ್ಲಿ ಹಾಲಿಟೋಲ್‌ಗೇಟ್ ಕಟ್ಟಡದಲ್ಲಿ 1 ಮಾಂಸದ ಅಂಗಡಿ.
2) ಮಾರ್ಕೆಟ್ ರಸ್ತೆ ಎಡಭಾಗದಲ್ಲಿರುವ 1 ರಿಂದ 13 ಅಂಗಡಿ ಮಳಿಗೆಗಳು.
3) ಹತ್ತು ಒಣಮೀನು ಸ್ಟಾಲುಗಳು.
4) ಒಣಮೀನು ಸ್ಟಾಲುಗಳ ಮುಂಭಾಗದ ಖಾಲಿ ಜಾಗದಲ್ಲಿ ಒಣಮೀನು ಮತ್ತು ಹಸಿಮೀನು ಮಾರಾಟ ಮಾಡುವಾಗ ಸುಂಕ ವಸೂಲಿ ಮಾಡುವ ಹಕ್ಕು.
5) ಪುರಸಭೆಗೆ ಸೇರಿರುವ ಟೋಲುಗಳಲ್ಲಿ ಸೈಕಲ್ ಮತ್ತು ಗಾಡಿಗಳ ಪ್ರವೇಶ ಶುಲ್ಕ ವಸೂಲಿ ಮಾಡುವ ಹಕ್ಕು.
6) ಪುರಸಭೆಗೆ ಸೇರಿರುವ ಸಂತೆಯಲ್ಲಿ ಸಂತೆ ಸುಂಕ ವಸೂಲಿ ಮಾಡುವ ಹಕ್ಕು.
7) ಮಾರ್ಕೆಟ್ ರಸ್ತೆ ಎಡಭಾಗದಲ್ಲಿರುವ 1 ರಿಂದ 13 ಅಕ್ಕಿ ಮಳಿಗೆಗಳು.
8) ಷರತ್ತುಗಳು ಮತ್ತು ಇತರ ವಿವರಗಳಿಗೆ ಪುರಸಭಾ ಕಾರ್ಯಾಲಯದಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| | |
|---|---|
| (ಸಹಿ) **ಎಂ. ಎಚ್. ಮೊಹಮುದ್ ಸಾದಿಕ್** | (ಸಹಿ) **ಆರ್. ಗುಂಡೂರಾವ್** |
| ಅಧ್ಯಕ್ಷರು, | ಮುಖ್ಯಾಧಿಕಾರಿಗಳು, |
| ಪುರಸಭೆ, ಕೊಪ್ಪ. | ಪುರಸಭೆ, ಕೊಪ್ಪ. |

**ಕೊಪ್ಪ ಪುರಸಭಾ ಕಾರ್ಯಾಲಯದಿಂದ**

# ಪ್ರಕಟಣೆ.

ನಂ. MUN. CR. 282/81–82 ತಾ. 12-2-82

**ವಿಷಯ:** ಭಾಗ್ಯಮಂದಿರ ಯೋಜನೆಯಡಿ ದುರ್ಬಲ ವರ್ಗದವರಿಗೆ ಮನೆ ಕಟ್ಟಲು ಸಹಾಯದ ಬಗ್ಗೆ.

ಕೊಪ್ಪ ಟೌನಿನ ವ್ಯಾಪ್ತಿಯಲ್ಲಿರುವ ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕರ್ನಾಟಕ ಸರ್ಕಾರದ ಆರ್ಡರ್ ನಂಬರ್ ಹೆಚ್. ಯು ಡಿ. 20 ಯು. ಹೆಚ್. ಎಸ್. 81 ದಿನಾಂಕ 19-10-1981 ಮತ್ತು ಜಿಲ್ಲಾಧಿಕಾರಿಯವರು, ಚಿಕ್ಕಮಗಳೂರು ರವರ ಪತ್ರದಸಂಖ್ಯೆ: ಮುನಿಸಿ (1) ಸಿಆರ್ 259:81-82 ದಿನಾಂಕ 29-1-1982ರ ಪತ್ರದಂತೆ 1981-82ನೇ ಸಾಲಿಗೆ ಕೊಪ್ಪ ಟೌನಿನಲ್ಲಿರುವ ಸಮಾಜದ ದುರ್ಬಲ ವರ್ಗದ 28 ಜನರಿಗೆ ಭಾಗ್ಯಮಂದಿರ ಯೋಜನೆ ಅನ್ವಯ ಮನೆಗಳನ್ನು ಕಟ್ಟಿಕೊಳ್ಳಲು ಹಾಗೂ 10 ಜನರಿಗೆ ಹಾಲಿ ಇರುವ ಮನೆಗಳನ್ನು ಉತ್ತಮಪಡಿಸಲು ಧನಸಹಾಯ ಮತ್ತು ಸಾಲದ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಆದ್ದರಿಂದ ಈ ಯೋಜನೆಯ ಅನ್ವಯ ಪ್ರಯೋಜನ ಪಡೆಯಲು ಇಷ್ಟವುಳ್ಳ ಆರ್ಥಿಕವಾಗಿ ಹಿಂದುಳಿದ ಜನರಿಂದ ಅರ್ಜಿಯನ್ನು ಕರೆಯಲಾಗಿದೆ. ಅರ್ಜಿಯನ್ನು ದಿನಾಂಕ 2-3-1982ರ ಒಳಗೆ ಪುರಸಭಾ ಕಾರ್ಯಾಲಯಕ್ಕೆ ತಲುಪಿಸತಕ್ಕದ್ದು. ಇತರ ವಿವರಗಳನ್ನು ಕಛೇರಿ ವೇಳೆಯಲ್ಲಿ ಪುರಸಭಾ ಕಾರ್ಯಾಲಯದಿಂದ ಪಡೆಯಬಹುದು.

| | |
|---|---|
| (ಸಹಿ) **ಎಂ. ಎಚ್. ಮೊಹಮುದ್ ಸಾದಿಕ್** | (ಸಹಿ) **ಆರ್. ಗುಂಡೂರಾವ್** |
| ಅಧ್ಯಕ್ಷರು, | ಮುಖ್ಯಾಧಿಕಾರಿಗಳು, |
| ಪುರಸಭೆ, ಕೊಪ್ಪ. | ಪುರಸಭೆ, ಕೊಪ್ಪ. |

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ: ಸಿರಿಮನೆ ನಾಗರಾಜ್. ಅಚ್ಚು: ನೇಸರ ಮುದ್ರಣ, ಕೊಪ್ಪ.

# ಆರೆಸ್ಸೆಸ್ಸಿನ ಸಹಚಿಂತನ ಕಾರ್ಯಕ್ರಮ

ಕೊಪ್ಪ: ರಾ.ಸ್ವ.ಸಂಘದವರು ಏರ್ಪಡಿಸಿದ್ದ 'ಸಹಚಿಂತನ' ಕಾರ್ಯಕ್ರಮ ಇಲ್ಲಿ ಫೆ. ೧೨ರಂದು ನಡೆಯಿತು.

ರಾಜ್ಯಪ್ರಚಾರಕ ನ. ಕೃಷ್ಣಪ್ಪ ಮಾತನಾಡಿ, ಹಿಂದೂ ಧರ್ಮಕ್ಕೆ ಎದುರಾಗಿರುವ ಆತಂಕಕರ ಪರಿಸ್ಥಿತಿಯನ್ನು ವಿವರಿಸಿದರು. ಹಿಂದೂ ಸಂಸ್ಕೃತಿಯ ರಕ್ಷಣೆಗಾಗಿ ವಿಶ್ವ ಹಿಂದೂ ಪರಿಷತ್ ೫೦೦ ಜನ 'ಹಿಂದೂ ಮಿಶನರಿ'ಗಳನ್ನು ತರಬೇತುಮಾಡಿ ಕೆಲಸಕ್ಕೆ ಹಚ್ಚುವ ೧೦ ಕೋಟಿ ರೂ.ಗಳ ಯೋಜನೆಯೊಂದನ್ನು ಹಾಕಿಕೊಂಡಿದ್ದು, ಅದಕ್ಕಾಗಿ ಎಲ್ಲ ಹಿಂದುಗಳೂ ಉದಾರವಾಗಿ ಧನ ಸಹಾಯ ಮಾಡಬೇಕೆಂದು ವಿನಂತಿಸಿದರು.

ಮತಾಂತರಕ್ಕೆ ಆರ್ಥಿಕ ದುಸ್ಥಿತಿಗಿಂತ ಧರ್ಮಶ್ರದ್ಧೆಯ ಕೊರತೆ, ಸ್ವಾರ್ಥ ಮತ್ತು ಅಸ್ಪೃಶ್ಯತೆಯ ಅಪಮಾನಗಳು ಕಾರಣ ಎಂದು ಅವರು ತಮ್ಮ ಭಾಷಣ ಮತ್ತು ನಂತರ ಪ್ರಶ್ನೋತ್ತರದ ಸಮಯದಲ್ಲಿ ತಿಳಿಸಿದರು. ಅಸ್ಪೃಶ್ಯತೆ ನಿವಾರಣೆ ತಮ್ಮ ತಮ್ಮ ಮನೆಗಳಿಂದ ಆರಂಭವಾಗಬೇಕೆಂದು ಅವರು ಕರೆಕೊಟ್ಟರು. ಕೇರಳದಲ್ಲಿ ಅಸ್ಪೃಶ್ಯತೆಯನ್ನು ಸಂಪೂರ್ಣ ತೊಡೆದು ಹಾಕಲಾಗಿದೆ ಎಂದ ಅವರು ದಕ್ಷಿಣಕನ್ನಡದಲ್ಲೂ ಅದು ಇಲ್ಲ ಎಂದು ತಿಳಿಸಿದರು.

## ಶೃಂಗೇರಿ ಬಾಲಿಕಾಪ್ರೌಢಶಾಲೆ 'ತಳಿರು'ಗೆ ಮೊದಲ ಪ್ರಶಸ್ತಿ

ಶೃಂಗೇರಿ: ವಿದ್ಯಾರ್ಥಿ ಕ್ಷೇಮ ನಿಧಿಯ ಆಶ್ರಯದಲ್ಲಿ ಫೆ. ೭ರಂದು ಇಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ತಾಲೂಕು ಮಟ್ಟದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಮಾರಂಭದ ಅಧ್ಯಕ್ಷತೆಯನ್ನು ಬಾಲಿಕಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಬಾಲಕೃಷ್ಣ ವಹಿಸಿದ್ದರು. 'ಫ್ಲಾಶ್ ಎಸೋಸಿಯೇಶನ್' ಕಾರ್ಯದರ್ಶಿ ಜಯೇಶ್ ಮುಖ್ಯ ಅತಿಥಿಗಳಾಗಿದ್ದರು.

ಬಾಲಿಕಾ ಪ್ರೌಢಶಾಲೆಯ ವಾರ್ಷಿಕ ಸಂಚಿಕೆ 'ತಳಿರು' ತಾ॥ ಮಟ್ಟದ ಪ್ರಥಮ ಬಹುಮಾನ ಪಡೆಯಿತು.

### ದೇಶ ಬೇರೆ, ಜಾತಿ ಒಂದೇ

ಕೊಪ್ಪ: 'ದೀವಟಿಗೆ'ಯ ೧೪-೨-೮೨ರ ಸಂಚಿಕೆಯಲ್ಲಿ ಪ್ರಕಟವಾಗಿರುವಂತೆ ಭೀಮ್ ಬಹದ್ದೂರ್ ಮತ್ತು ಸರಸ್ವತೀಬಾಯಿ ಅವರದು ಅಂತರ್ಜಾತಿ ವಿವಾಹ ಅಲ್ಲವೆಂದೂ, ದೇಶ ಬೇರೆಯಾದರೂ ಜಾತಿ ಒಂದೇ ಎಂದೂ ತಿಳಿದು ಬಂದಿದೆ. ಉದ್ದೇಶಿತವಲ್ಲದ ತಪ್ಪಿಗಾಗಿ ವಿಷಾದಿಸುತ್ತೇವೆ. –ಸಂ.

## ಉದ್ಯೋಗ ವಾರ್ತೆ

I ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ೧೦೦ ಇಂಗ್ಲಿಷ್ ಬೆರಳಚ್ಚುಗಾರರ ಹುದ್ದೆಗಳಿಗೆ ಅರ್ಜಿ ಕರೆದಿದೆ. ಕಡೇತಾರೀಖು ೩೧-೩-೮೨ ವಿವರಗಳಿಗೆ ೧೧-೨-೮೨ ರ ಗಜೆಟ್ ನೋಡಿ.

II ಬೆಂಗಳೂರಿನ ಚೀಫ್ ಮಾರ್ಕೆಟಿಂಗ್ ಆಫೀಸರ್ ಈ ಕೆಳಗಿನ ಹುದ್ದೆಗಳಿಗೆ ಅರ್ಜಿ ಕರೆದಿದ್ದಾರೆ: ರಸಾಯನ ಶಾಸ್ತ್ರಜ್ಞ (೧೧) ಪ್ರ. ದ. ಗುಮಾಸ್ತರು (೪೭), ಶೀಘ್ರಲಿಪಿಗಾರರು (೭), ೨ನೇ ದರ್ಜೆ ಗುಮಾಸ್ತರು (೨೭), ಬೆರಳಚ್ಚುಗಾರರು/ ಗುಮಾಸ್ತರು (೫೧).

III ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿಯಿಂದ ಈ ಹುದ್ದೆಗಳಿಗೆ ಅರ್ಜಿ ಕರೆದಿದೆ: ಪ್ರ. ದ. ಗುಮಾಸ್ತ (೧೦), ೨ನೇ ದರ್ಜೆ ಗುಮಾಸ್ತ (೧೦), ೨ನೇ ದರ್ಜೆ ಬೆರಳಚ್ಚುಗಾರ/ಗುಮಾಸ್ತ (೨೪).

II ಮತ್ತು III ಎರಡಕ್ಕೂ ಕಡೇ ತಾರೀಖು ೨೭.೨.೮೨. ಗೆಜೆಟ್ ೪.೨.೮೨.

## ಕಾವ್ಯ ಸಂಜೆ

ಕೊಪ್ಪ: ಇಲ್ಲಿನ ಸರಕಾರಿ ಕಿರಿಯ ಕಾಲೇಜಿನಲ್ಲಿ ಫೆ. ೧೯ರಂದು 'ಕಾವ್ಯ ಸಂಜೆ' ಕಾರ್ಯಕ್ರಮ ನಡೆಯಿತು. ಪ್ರೌಢಶಾಲಾ ನಿವೃತ್ತ ಉಪಾಧ್ಯಾಯ, ಕವಿ, ಬಿ.ಎಂ. ಮುತ್ತಯ್ಯನವರ 'ನಿಸರ್ಗನಿನಾದ ಮತ್ತು ಇತರ ಕವನಗಳು' ಎಂಬ ಕವನಸಂಕಲನದ ವಿಮರ್ಶೆ ನಡೆಯಿತು.

ಕೃತಿಯನ್ನು ಕುರಿತು ಮಾತನಾಡಿದ ಪ್ರಾಚಾರ್ಯ ಕೆ. ಎಸ್. ನಾರಾಯಣ ಸ್ವಾಮಿ, ಅಧ್ಯಾಪಕರಾದ ಹೆಚ್. ಬಿ. ಹನುಮಪ್ಪ, ಶಿವನಂಜಯ್ಯ, ಮಲ್ಲಿಕಾರ್ಜುನ ಭಟ್ ಮತ್ತು ರಾಮರಾವ್ ಅವರುಗಳು, ಕವಿಯ ಸಾಧನೆಯನ್ನು ಶ್ಲಾಘಿಸುತ್ತ, ಅದು ಸಾರ್ಥಕವಾಗಬೇಕಾದರೆ ಸಹೃದಯ ಓದುಗರು ಕೃತಿಯನ್ನು ಕೊಂಡು ಓದುವುದೂ ಮುಖ್ಯ ಎಂದರು.

ಎಸ್. ಎಸ್. ವಿಶ್ವೇಶ್ವರ್ ಸ್ವಾಗತಿಸಿದರು. ಮುತ್ತಯ್ಯ ವಂದಿಸಿದರು.

### ರಾಘವೇಂದ್ರ ಟೀಮಿಗೆ ಕ್ರಿಕೆಟ್ ಜಯ

ಕೊಪ್ಪ: ಇಲ್ಲಿನ ರಾಘವೇಂದ್ರ ಕ್ರಿಕೆಟ್ ಟೀಮಿನವರು ಅಬೂಬಕರ್ ಅವರ ಉತ್ತಮ ಬೌಲಿಂಗ್ ಮತ್ತು ಸತೀಶ್ ಅವರ ಬಿರುಸಿನ ಬ್ಯಾಟಿಂಗ್ (೬೬) ನೆರವಿನಿಂದ ಫೆ. ೧೧ ರಂದು ಹರಿಹರಪುರದ ಡೈಮಂಡ್ ಟೀಮಿನ ಮೇಲೆ ೫೭ ರನ್ನುಗಳ ಜಯಗಳಿಸಿದರು.



---

**ಕೊಪ್ಪ ಪುರಸಭಾ ಕಾರ್ಯಾಲಯದಿಂದ**

## ಪ್ರಕಟಣೆ.

ನಂ. ಮುಸಸಿಆರ್ 282/81-82 ತಾ. 12.2.82.

**ವಿಷಯ:** 1982-83 ನೇ ಸಾಲಿನ ಲೀಸ್ ಆಕ್ಷನ್ ನೋಟಿಫಿಕೇಶನ್

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಕೊಪ್ಪ ಟೌನ್ ಪುರಸಭೆಯ ವ್ಯಾಪ್ತಿಯೊಳಗೆ ದಿನಾಂಕ 1-4-1982 ರಿಂದ 31-3-1983ರ ವರೆಗೆ ಅಂದರೆ ಒಂದು ವರ್ಷ ಕಾಲಾವಧಿಗೆ ಈ ಪುರಸಭೆಗೆ ಸೇರಿದ ಈ ಕೆಳಕಂಡ ಬಾಬ್ತನ್ನು ದಿನಾಂಕ 14-3-1982ರ ಭಾನುವಾರ ಬೆಳಿಗ್ಗೆ 11-00 ಘಂಟೆಗೆ ಪುರಸಭಾ ಕಾರ್ಯಾಲಯದಲ್ಲಿ ಪುರಸಭೆಯ ಅಧ್ಯಕ್ಷರು– ಮುಖ್ಯಾಧಿಕಾರಿಗಳು ಅಥವಾ ಅವರಿಂದ ಅಧಿಕಾರ ಪಡೆದವರಿಂದ ಬಹಿರಂಗ ಹರಾಜು ಮೂಲಕ (ವಾಹಿದವಾರ ಲೈಸೆನ್ಸ್ ಫೀಯೇರಿಗೆ) ಪುರಸಭೆಯು ವಿಧಿಸುವ ಷರತ್ತಿಗೆ ಒಳಪಟ್ಟು ವಿಲೇವಾರಿ ಮಾಡಲಾಗುತ್ತದೆ. ಇಷ್ಟವುಳ್ಳವರು ಈ ಲೀಸ್ ಆಕ್ಷನ್‌ನಲ್ಲಿ ಭಾಗವಹಿಸಿ ಪಡೆಯಬಹುದು.

ಹರಾಜು ಮಾಡುವ ಬಾಬುಗಳ ವಿವರಗಳು:

1) ಸ್ಲಾಟರ್ ಹೌಸಿನಲ್ಲಿ ಆಡು ಮತ್ತು ಕುರಿಗಳನ್ನು ಕಡಿಯುವ ಮತ್ತು ಅವುಗಳ ಮಾಂಸವನ್ನು ಮಾರಾಟ ಮಾಡುವ ಹಕ್ಕುಗಳನ್ನು ಮಾರ್ಕೆಟ್ ರಸ್ತೆಯಲ್ಲಿರುವ 2 ಮಾಂಸದ ಅಂಗಡಿಗಳು, ಮೇಗಲ ಪೇಟೆಯಲ್ಲಿ ಹಾಲಿಟೋಲ್‌ಗೇಟ್ ಕಟ್ಟಡದಲ್ಲಿ 1 ಮಾಂಸದ ಅಂಗಡಿ.
2) ಮಾರ್ಕೆಟ್ ರಸ್ತೆ ಎಡಭಾಗದಲ್ಲಿರುವ 1 ರಿಂದ 13 ಅಂಗಡಿ ಮಳಿಗೆಗಳು.
3) ಹತ್ತು ಒಣಮೀನು ಸ್ಟಾಲುಗಳು.
4) ಒಣಮೀನು ಸ್ಟಾಲುಗಳ ಮುಂಭಾಗದ ಖಾಲಿ ಜಾಗದಲ್ಲಿ ಒಣಮೀನು ಮತ್ತು ಹಸಿಮೀನು ಮಾರಾಟ ಮಾಡುವಾಗ ಸುಂಕ ವಸೂಲಿ ಮಾಡುವ ಹಕ್ಕು.
5) ಪುರಸಭೆಗೆ ಸೇರಿರುವ ಟೋಲುಗಳಲ್ಲಿ ಸೈಕಲ್ ಮತ್ತು ಗಾಡಿಗಳ ಪ್ರವೇಶ ಶುಲ್ಕ ವಸೂಲಿ ಮಾಡುವ ಹಕ್ಕು.
6) ಪುರಸಭೆಗೆ ಸೇರಿರುವ ಸಂತೆಯಲ್ಲಿ ಸಂತೆ ಸುಂಕ ವಸೂಲಿ ಮಾಡುವ ಹಕ್ಕು.
7) ಮಾರ್ಕೆಟ್ ರಸ್ತೆ ಎಡಭಾಗದಲ್ಲಿರುವ 1 ರಿಂದ 13 ಅಕ್ಕಿ ಮಳಿಗೆಗಳು.
8) ಷರತ್ತುಗಳು ಮತ್ತು ಇತರ ವಿವರಗಳಿಗೆ ಪುರಸಭಾ ಕಾರ್ಯಾಲಯದಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| | |
|---|---|
| (ಸಹಿ) **ಎಂ. ಎಚ್. ಮೊಹಮದ್ ಸಾದಿಕ್** | (ಸಹಿ) **ಆರ್. ಗುಂಡೂರಾವ್** |
| ಅಧ್ಯಕ್ಷರು, | ಮುಖ್ಯಾಧಿಕಾರಿಗಳು, |
| ಪುರಸಭೆ, ಕೊಪ್ಪ. | ಪುರಸಭೆ, ಕೊಪ್ಪ. |

---

**ಕೊಪ್ಪ ಪುರಸಭಾ ಕಾರ್ಯಾಲಯದಿಂದ**

## ಪ್ರಕಟಣೆ.

ನಂ. MUN. CR. 282/81-82 ತಾ. 12-2-82

**ವಿಷಯ:** ಭಾಗ್ಯಮಂದಿರ ಯೋಜನೆಯಡಿ ದುರ್ಬಲ ವರ್ಗದವರಿಗೆ ಮನೆ ಕಟ್ಟಲು ಸಹಾಯದ ಬಗ್ಗೆ.

ಕೊಪ್ಪ ಟೌನಿನ ವ್ಯಾಪ್ತಿಯಲ್ಲಿರುವ ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕರ್ನಾಟಕ ಸರ್ಕಾರದ ಆರ್ಡರ್ ನಂಬರ್ ಹೆಚ್. ಯು ಡಿ. 20 ಯು. ಹೆಚ್. ಎಸ್. 81 ದಿನಾಂಕ 19-10-1981 ಮತ್ತು ಜಿಲ್ಲಾಧಿಕಾರಿಯವರು, ಚಿಕ್ಕಮಗಳೂರುರವರ ಪತ್ರದಸಂಖ್ಯೆ: ಮುನಿಸಿ (1) ಸಿಆರ್ 259:81-82 ದಿನಾಂಕ 29-1-1982ರ ಪತ್ರದಂತೆ 1981-82ನೇ ಸಾಲಿಗೆ ಕೊಪ್ಪ ಟೌನಿನಲ್ಲಿರುವ ಸಮಾಜದ ದುರ್ಬಲ ವರ್ಗದ 28 ಜನರಿಗೆ ಭಾಗ್ಯಮಂದಿರ ಯೋಜನೆ ಅನ್ವಯ ಮನೆಗಳನ್ನು ಕಟ್ಟಿಕೊಳ್ಳಲು ಹಾಗೂ 10 ಜನರಿಗೆ ಹಾಲಿ ಇರುವ ಮನೆಗಳನ್ನು ಉತ್ತಮಪಡಿಸಲು ಧನಸಹಾಯ ಮತ್ತು ಸಾಲದ ಮೊಬಲಗು ಪಡೆಯಲು ಅವಕಾಶವಿರುತ್ತದೆ. ಆದ್ದರಿಂದ ಈ ಯೋಜನೆಯ ಅನ್ವಯ ಪ್ರಯೋಜನ ಪಡೆಯಲು ಇಷ್ಟವುಳ್ಳ ಆರ್ಥಿಕವಾಗಿ ಹಿಂದುಳಿದ ಜನರಿಂದ ಅರ್ಜಿಯನ್ನು ಕರೆಯಲಾಗಿದೆ. ಅರ್ಜಿಯನ್ನು ದಿನಾಂಕ 2-3-1982ರ ಒಳಗೆ ಪುರಸಭಾ ಕಾರ್ಯಾಲಯಕ್ಕೆ ತಲುಪಿಸತಕ್ಕದ್ದು. ಇತರ ವಿವರಗಳನ್ನು ಕಛೇರಿ ವೇಳೆಯಲ್ಲಿ ಪುರಸಭಾ ಕಾರ್ಯಾಲಯದಿಂದ ಪಡೆಯಬಹುದು.

| | |
|---|---|
| (ಸಹಿ) **ಎಂ. ಎಚ್. ಮೊಹಮದ್ ಸಾದಿಕ್** | (ಸಹಿ) **ಆರ್. ಗುಂಡೂರಾವ್** |
| ಅಧ್ಯಕ್ಷರು, | ಮುಖ್ಯಾಧಿಕಾರಿಗಳು, |
| ಪುರಸಭೆ, ಕೊಪ್ಪ. | ಪುರಸಭೆ, ಕೊಪ್ಪ. |

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ: ಸಿರಿಮನೆ ನಾಗರಾಜ್. ಅಚ್ಚು: ನೇಸರ ಮುದ್ರಣ, ಕೊಪ್ಪ.